**C**

**CCE PR REVISED**

**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SECONDARY EDUCATION EXAMINATION BOARD, MALLESWARAM, BANGALORE – 560 003**

**ಎಸ್.ಎಸ್.ಎಲ್.ಸಿ. ಪರೀಕ್ಷೆ, ಜೂನ್, 2018**

**S.S.L.C. EXAMINATION, JUNE, 2018**

# ಮಾದರಿ ಉತ್ತರಗಳು

# MODEL ANSWERS

ದಿನಾಂಕ : 22. 06. 2018 ] **ಸಂಕೇತ ಸಂಖ್ಯೆ : 01-K**

Date : 22. 06. 2018 ] **CODE NO. : 01-K**

## ವಿಷಯ : ಪ್ರಥಮ ಭಾಷೆ — ಕನ್ನಡ

## Subject : First Language — KANNADA

**(ಹೊಸ ಪಠ್ಯಕ್ರಮ / New Syllabus)**

**(ಪುನರಾವರ್ತಿತ ಖಾಸಗಿ ಅಭ್ಯರ್ಥಿ / Private Repeater)**

**[ ಗರಿಷ್ಠ ಅಂಕಗಳು : 125**

**[ Max. Marks : 125**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ವಿಭಾಗ – 'ಎ'** | |
| | **(ಪಠ್ಯಗಳ ಅಧ್ಯಯನ – ಗದ್ಯ, ಪದ್ಯ, ಪೋಷಕ ಅಧ್ಯಯನ)** | |
| | **ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು.** | |
| | **(ವಾಕ್ಯ ರೂಪದಲ್ಲಿರುವ ಪ್ರತಿ ಸರಿಯುತ್ತರಕ್ಕೆ ಒಂದು ಅಂಕ) :** | 16 × 1 = 16 |
| 1. | ಯುದ್ಧದ ಬಗೆಗೆ ಮುದುಕಿಯ ಅಭಿಪ್ರಾಯವೇನು ? | |
| | ***ಉತ್ತರ :*** | |
| | ಎಲ್ಲರಿಗೂ ದೇಹಕ್ಕೂ ಮನಸ್ಸಿಗೂ ಗಾಯ ಮಾಡುವುದೇ ಯುದ್ಧದ ಪರಿ ಎಂಬುದು ಮುದುಕಿಯ ಅಭಿಪ್ರಾಯವಾಗಿದೆ. | |
| 2. | ಲಂಡನ್ನಿನಲ್ಲಿ ನೆಲ್ಸನ್‌ರವರ ಮೂರ್ತಿಯಿರುವ ಸ್ಥಳದ ಹೆಸರೇನು ? | |
| | ***ಉತ್ತರ :*** | |
| | ಲಂಡನ್ನಿನಲ್ಲಿ 'ಟ್ರಾಫಲ್ಗಾರ್ ಸ್ಕ್ವೇರ್' ಎಂಬಲ್ಲಿ ನೆಲ್ಸನ್‌ರವರ ಮೂರ್ತಿಯಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 3. | ವಿಶ್ವೇಶ್ವರಯ್ಯ ಅವರ ಹುಟ್ಟುಹಬ್ಬದ ನೆನಪಿಗಾಗಿ ಯಾವ ದಿನಾಚರಣೆಯನ್ನು ಆಚರಿಸಲಾಗುತ್ತಿದೆ ? | |
| | *ಉತ್ತರ :* | |
| | ವಿಶ್ವೇಶ್ವರಯ್ಯ ಅವರ ಹುಟ್ಟುಹಬ್ಬದ ನೆನಪಿಗಾಗಿ 'ಎಂಜಿನಿಯರ್ಸ್ ದಿನಾಚರಣೆ'ಯನ್ನು ಆಚರಿಸಲಾಗುತಿದೆ. | |
| 4. | ಮನೆಮಂಚಮ್ಮನ ಕತೆ ಹೇಳಿದ ಕವಿಯ ಹೆಸರೇನು ? | |
| | *ಉತ್ತರ :* | |
| | ಮನೆಮಂಚಮ್ಮನ ಕತೆ ಹೇಳಿದ ಕವಿ ಸಿದ್ಧಲಿಂಗಯ್ಯನವರು. | |
| 5. | ಭಗವದ್ಗೀತೆಯನ್ನು ರಚಿಸಿದವರು ಯಾರು ? | |
| | *ಉತ್ತರ :* | |
| | ಭಾರತೀಯರ ಪೂಜ್ಯ ಗ್ರಂಥವಾದ 'ಭಗವದ್ಗೀತೆ'ಯನ್ನು ರಚಿಸಿದವರು ಮಹರ್ಷಿ ವೇದವ್ಯಾಸರು. | |
| 6. | ದುಷ್ಟಬುದ್ಧಿಯು ಧರ್ಮಬುದ್ಧಿಯ ಮೇಲೆ ಯಾವ ಆರೋಪವನ್ನು ಹೊರಿಸಿದನು ? | |
| | *ಉತ್ತರ :* | |
| | ದೊಡ್ಡದಾದ ಅಶ್ವತ್ಥ ಮರದ ಕೆಳಗಡೆ ಹೂಳಿಟ್ಟಿದ್ದ ಸಂಪತ್ತನ್ನು, ಹಣವನ್ನು 'ನೀನೇ ತೆಗೆದುಕೊಂಡು ಹೋಗಿರುವಿ' ಎಂದು ದುಷ್ಟಬುದ್ಧಿಯು ಧರ್ಮಬುದ್ಧಿಯ ಮೇಲೆ ಆರೋಪವನ್ನು ಹೊರಿಸಿದನು. | |
| 7. | ನದೀಜಲಗಳು ಏನಾಗಿವೆ ? | |
| | *ಉತ್ತರ :* | |
| | ನದೀಜಲಗಳು ಕಲುಷಿತವಾಗಿವೆ. | |
| 8. | ಹಕ್ಕಿಯು ಯಾವುದರ ಸಂಕೇತವಾಗಿದೆ ? | |
| | *ಉತ್ತರ :* | |
| | ಹಾರುವ ಹಕ್ಕಿಯು ಕಾಲದ ಗತಿಯ ಸಂಕೇತವಾಗಿದೆ. | |
| 9. | ಹಕ್ಕಿ ಯಾರನ್ನು ಹರಸಿದೆ ? | |
| | *ಉತ್ತರ :* | |
| | ಹಕ್ಕಿಯು ಹೊಸಗಾಲದ ಹಸುಮಕ್ಕಳನ್ನು ಹರಸಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 10. | ಕುಂಪಣಿ ಸರಕಾರ ಹೊರಡಿಸಿದ ಆದೇಶ ಏನು ?<br>***ಉತ್ತರ :***<br>ಕುಂಪಣಿ ಸರಕಾರ ಭಾರತೀಯರ ಮೇಲೆ ನಿಶ್ಶಸ್ತ್ರೀಕರಣದ ಆದೇಶವನ್ನು ಹೊರಡಿಸಿತು. | |
| 11. | ಅಶ್ವಿನಿ ದೇವತೆಗಳ ವರಬಲದಿಂದ ಜನಿಸಿದವರು ಯಾರು ?<br>***ಉತ್ತರ :***<br>ಅಶ್ವಿನಿ ದೇವತೆಗಳ ವರಬಲದಿಂದ ಮಾದ್ರಿಯಲ್ಲಿ ಜನಿಸಿದವರು ನಕುಲ ಮತ್ತು ಸಹದೇವರು. | |
| 12. | ಕವಿಯು ನೋಡಿದ ಅಡಕೆಯ ತೋಟ ಎಲ್ಲಿದೆ ?<br>***ಉತ್ತರ :***<br>ಕವಿಯು ನೋಡಿದ ಅಡಕೆಯ ತೋಟ ಬನದಂಚಿನಲ್ಲಿದೆ. | |
| 13. | ದಿನಪಸುತ ಎಂದರೆ ಯಾರು ?<br>***ಉತ್ತರ :***<br>ದಿನಪಸುತ ಎಂದರೆ ಸೂರ್ಯದೇವನಿಂದ ಕುಂತಿಯಲ್ಲಿ ಜನಿಸಿದ ಕರ್ಣ. | |
| 14. | ದ್ರೋಣನು ಯಾರೊಡನೆ ಪರಶುರಾಮನ ಬಳಿಗೆ ಬಂದನು ?<br>***ಉತ್ತರ :***<br>ದ್ರೋಣನು ಅಶ್ವತ್ಥಾಮನೊಡನೆ ಪರಶುರಾಮನ ಬಳಿಗೆ ಬಂದನು. | |
| 15. | ಪುಟ್ಟ ಪೋರಿ ಏನು ಮಾಡುತ್ತಿದ್ದಾಳೆ ?<br>***ಉತ್ತರ :***<br>ಪುಟ್ಟ ಪೋರಿ ಮುಸುರೆ ತಿಕ್ಕುತ್ತಿದ್ದಾಳೆ. | |
| 16. | ಪುಟ್ಟ ಪೋರಿಯ ಅಮ್ಮ ಎಲ್ಲಿ ಮಲಗಿದ್ದಾಳೆ ?<br>***ಉತ್ತರ :***<br>ಪುಟ್ಟ ಪೋರಿಯ ಅಮ್ಮ ಗೂರುತ್ತ ಗುಡಿಸಲಿನಲ್ಲಿ ಮಲಗಿದ್ದಾಳೆ. | |
| | **ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಪ್ರಶ್ನೆಗೂ ಎರಡು ಅಂಕಗಳು) :** | $16 \times 2 = 32$ |
| 17. | ವೂಲವರ್ಥ ಅಂಗಡಿಯಲ್ಲಿ ಸಿಗುವ ವಸ್ತುಗಳಾವುವು ?<br>***ಉತ್ತರ :***<br>'ವೂಲವರ್ಥ' ಎಂಬ ಸ್ಟೇಷನರಿ ಅಂಗಡಿಯಲ್ಲಿ ಬೂಟು, ಕಾಲುಚೀಲ, ಚಣ್ಣ, ಸಾಬೂನು, ಔಷಧ, ಪುಸ್ತಕ, ಅಡಿಗೆಯ ಪಾತ್ರೆ, ಇಲೆಕ್ಟ್ರಿಕ್ ದೀಪದ ಸಾಮಾನು, ಫೋಟೋ, ಅಡವಿಯ ಹೂ, ಯುದ್ಧ ಸಾಮಗ್ರಿ ಹೀಗೆ ಎಲ್ಲಾ ತರಹದ ಎಲ್ಲವೂ ಇಲ್ಲಿ ಸಿಗುತ್ತವೆ. ಎಲ್ಲಾ ತರಹದ ಸಾಮಾನುಗಳನ್ನು ಇಲ್ಲಿ ಒಂದು ಪೆನ್ನಿಯಿಂದ ಆರು ಪೆನ್ನಿಯವರೆಗೆ ಮಾರುತ್ತಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 18. | ಸಾಮ್ರಾಟರ ರಾಜ್ಯಾಭಿಷೇಕವಾಗುವ ಸಿಂಹಾಸನದ ಮೇಲಿರುವ ಕಲ್ಲುಪಾಟಿಯ ವಿಶೇಷತೆಯೇನು ?<br>*ಉತ್ತರ :*<br>ಸಾಮ್ರಾಟರ ರಾಜ್ಯಾಭಿಷೇಕವಾಗುವ ಸಿಂಹಾಸನದ ಮೇಲಿರುವ ಕಲ್ಲುಪಾಟಿಯ ವಿಶೇಷತೆಯೇನೆಂದರೆ, ಪಟ್ಟಾಭಿಷೇಕವಾಗುವಾಗ ಮಾತ್ರ ಸಾಮ್ರಾಟರು ಇದರ ಮೇಲೆ ಕೂಡಬೇಕು. ಈ ಶಿಲೆಯನ್ನು ಒಳಗೊಂಡಿರುವ ಸಿಂಹಾಸನವು ವೆಸ್ಟ್‌ಮಿನ್‌ಸ್ಟರ್ ಮಂದಿರದಲ್ಲಿಯ ಒಂದು ಭಾಗದಲ್ಲಿದೆ. 'ಸ್ಟೋನ್ ಆಫ್ ಸ್ಕೋನ್' ಎಂದು ಇದರ ಹೆಸರು. 3ನೇ ಎಡ್ವರ್ಡನು ಸ್ಕಾಟ್‌ಲೆಂಡಿನ ಅರಸರಿಂದ ಇದನ್ನು ಕಿತ್ತುಕೊಂಡು ಬಂದಂತೆ ಕಾಣುತ್ತದೆ. ಅಂದಿನಿಂದ ಎಲ್ಲಾ ಸಾಮ್ರಾಟರ ಅಭಿಷೇಕ ಈ ಕಲ್ಲಿನ ಮೇಲೆಯೇ ಆಗಿದೆ. | |
| 19. | ಅಶೋಕ ಪೈ ಅವರು ಹೇಳಿದ ಸಂಶೋಧನಾ ಸತ್ಯವನ್ನು ತಿಳಿಸಿ.<br>*ಉತ್ತರ :*<br>ಕೆಲವು ಜನ ಒಂದು ಕೊಠಡಿಯಲ್ಲಿ ಕುಳಿತು ಟಿ.ವಿ. ನೋಡುತ್ತಿರುತ್ತಾರೆ. ಇನ್ನೊಂದಿಷ್ಟು ಜನ ಇದರ ಅರಿವಿಲ್ಲದೆ ಪಕ್ಕದ ಕೊಠಡಿಯಲ್ಲಿ ಏನೋ ಮಾತನಾಡುತ್ತಾ ಕುಳಿತಿರುತ್ತಾರೆ. ಆಗ ಟಿ.ವಿ.ಯಲ್ಲಿ ಕೊಲೆ ದೃಶ್ಯ ಬಂದು ಅದನ್ನು ನೋಡುತ್ತಿದ್ದವರ ದುಃಖದ ಭಾವನೆಯು ಇದನ್ನು ನೋಡದೆ ಪಕ್ಕದ ಕೊಠಡಿಯಲ್ಲಿರುವವರ ಮನಸ್ಸಿಗೂ ಮುಟ್ಟಿ ಅವರ ಮನಸ್ಸು ಸ್ವಲ್ಪಮಟ್ಟಿಗೆ ದುಗುಡಗೊಳ್ಳುತ್ತದಂತೆ, ಟಿ.ವಿ.ಯಲ್ಲಿ ನೃತ್ಯ ದೃಶ್ಯ ಬಂದಾಗ ಅದನ್ನು ನೋಡುತ್ತಿದ್ದವರ ಖುಷಿಯ ಭಾವನೆಯು ಪಕ್ಕದ ಕೊಠಡಿಯಲ್ಲಿರುವವರ ಮೇಲೂ ಪರಿಣಾಮ ಮಾಡಿ ಸ್ವಲ್ಪಮಟ್ಟಿಗೆ ಸಂತೋಷದ ಭಾವನೆ ಉಂಟಾಗುವುದೆಂಬುದು ಅಂದರೆ ಯಾವ ಜೀವಿಯೂ ತನ್ನಷ್ಟಕ್ಕೆ ತಾನಿಲ್ಲ. ಅನುಕಂಪನ ಇಡೀ ಜೀವಸಂಕುಲವನ್ನೇ ಒಂದು ಎಂದು ಹೇಳುತ್ತದೆ ಎಂಬುದು ಮನೋವೈದ್ಯರಾದ ಡಾ. ಅಶೋಕ ಪೈ ಅವರು ಹೇಳಿದ ಸಂಶೋಧನಾ ಸತ್ಯವಾಗಿದೆ. | |
| 20. | ಶಾನುಭೋಗರು ಮೂರ್ಛೆಯಲ್ಲಿದ್ದಾಗ ನಡೆದ ಘಟನೆಯನ್ನು ತಿಳಿಸಿ.<br>*ಉತ್ತರ :*<br>ಶಾನುಭೋಗರು ಮೂರ್ಛೆಯಲ್ಲಿದ್ದಾಗ ನಡೆದದ್ದು ಇಷ್ಟು; ಚಿಕ್ಕನಾಯಕನಹಳ್ಳಿಗೆ ತೆಂಗಿನಕಾಯಿ ತುಂಬಿಕೊಂಡು ಹೋಗಿದ್ದ ರೈತರು ತಿಂಗಳ ಬೆಳಕಿನಲ್ಲಿ ಗಾಡಿ ಹೊಡೆದುಕೊಂಡು ತಮ್ಮ ಹಳ್ಳಿಗೆ ಹಿಂದಿರುಗುತ್ತಿದ್ದರು. ಶಾನುಭೋಗರು ಬಿದ್ದ ಸ್ಥಳ ಕಾಲು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಹರದಾರಿಯಿರುವಾಗ ಎತ್ತುಗಳು ಮುಂದೆ ಹೋಗದೆ ಕಣಿ ಹಾಕಿಕೊಂಡವು. ಅದೇ ವೇಳೆಗೆ ಹುಲಿಯ ಗರ್ಜನೆ ಕೇಳಿಸಿತು. ಎತ್ತುಗಳ ಗಂಟೆಯ ಶಬ್ದ ಹಾಗೂ ರೈತರ ಮಾತು ಕೇಳಿದ ಹುಲಿ ಅಲ್ಲಿಂದ ಪಲಾಯನ ಮಾಡುತ್ತದ. ಮತ್ತೆ ಹುಲಿಯ ಗರ್ಜನೆ ಕೇಳದಾದಾಗ ರೈತರು ತಮ್ಮಲ್ಲಿದ್ದ ಕೋವಿಯಿಂದ ಒಂದೆರಡು ತೋಟಾ ಹಾರಿಸಿ, ಗಲಭೆ ಮಾಡುತ್ತಾ ತೆಂಗಿನ ಗರಿಯ ಪಂಜು ಹೊತ್ತಿಸಿಕೊಂಡು ಜಾಗರೂಕತೆಯಿಂದ ಮುಂದುವರೆದರು. ಮೂರ್ಛೆಯಲ್ಲಿ ಬಿದ್ದಿದ್ದ ಶಾನುಭೋಗರನ್ನು ಕಂಡು ಮುಖದ ಮೇಲೆ ನೀರೆರಚಿ ಎಚ್ಚರಿಸಿದರು. | |
| 21. | ಹುಲಿಯು ಹಿಂದಿನಿಂದ ಹಾರಿ ಕೊಲ್ಲದಿರಲು ಕಾರಣಗಳೇನು ?<br>***ಉತ್ತರ :***<br>ಹುಲಿಯು ಹಿಂದಿನಿಂದ ಹಾರಿ ಕೊಲ್ಲದಿರಲು ಕಾರಣ; ಸದ್ವಂಶದಲ್ಲಿ ಹುಟ್ಟಿದ ಸತ್ಯವ್ರತೆಯಾದ ಪುಣ್ಯಕೋಟಿಯನ್ನು ತಿನ್ನದೆ ಬಿಟ್ಟ ಹುಲಿಯ ಮೊಮ್ಮಗನಾದುದರಿಂದಲೂ, ಶ್ರೀರಾಮ ಹುಟ್ಟಿದ ಭರತಖಂಡದಲ್ಲಿ ಮತ್ತು ಭಗವದ್ಗೀತ ಹುಟ್ಟಿದ ಈ ಪವಿತ್ರ ನೆಲದಲ್ಲಿ ಹುಟ್ಟಿದ ಯಾವುದೇ ಹುಲಿಯು ಅಧರ್ಮಕ್ಕೆ ಕೈ ಹಾಕುವುದಿಲ್ಲವೆಂಬ ಆದರ್ಶವನ್ನು ಹೊಂದಿದ್ದರಿಂದ ಹುಲಿಯು ಹಿಂದಿನಿಂದ ಹಾರಿ ಶಾನುಭೋಗರನ್ನು ಕೊಲ್ಲಲಿಲ್ಲ. | |
| 22. | ಧರ್ಮಬುದ್ಧಿಗೆ ದುಷ್ಟಬುದ್ಧಿಯು ಯಾವ ಸಲಹೆಯನ್ನು ನೀಡಿದನು ?<br>***ಉತ್ತರ :***<br>ಮಧುರಾನಗರದ ಧರ್ಮಬುದ್ಧಿ, ದುಷ್ಟಬುದ್ಧಿ ಎಂಬ ವ್ಯಾಪಾರಿಗಳು ವ್ಯಾಪಾರ ಮಾಡಿಕೊಂಡು ಮರಳಿ ನಗರದ ಹೊರವಲಯದಲ್ಲಿರುವ ಉದ್ಯಾನವನದಲ್ಲಿ ರಾತ್ರಿಯನ್ನು ಕಳೆಯುತ್ತಿರುತ್ತಾರೆ. ಮಧ್ಯರಾತ್ರಿ ದುಷ್ಟಬುದ್ಧಿಯು ಧರ್ಮಬುದ್ಧಿಗೆ ಹೀಗೆ ಸಲಹೆ ನೀಡುತ್ತಾನೆ. ನಾವು ವ್ಯಾಪಾರ ಮಾಡಿ ಗಳಿಸಿಕೊಂಡು ಬಂದ ಈ ಸಂಪತ್ತನ್ನು ಹಂಚಿಕೊಂಡು ಹೋಗಿ ಮನೆಯಲ್ಲಿಯೇ ಯಾವಾಗಲೂ ಇರುವವರಲ್ಲ. ಮತ್ತೆ ವ್ಯಾಪಾರಕ್ಕಾಗಿ ಹೋಗುತ್ತಿರುತ್ತೇವೆ. ಆದ್ದರಿಂದ ಈಗ ನಮಗೆ ಬೇಕಾದಷ್ಟು ಹೊನ್ನನ್ನು ತೆಗೆದುಕೊಂಡು ಉಳಿದಿರುವ ಎಲ್ಲಾ ಹೊನ್ನನ್ನು ಈ ಅಶ್ವತ್ಥಮರದ ಕೆಳಗೆ ಹೂತಿಟ್ಟು ಹೋಗೋಣ. ನಮಗೆ ಬೇಕಾದಾಗ ಬಂದು ತೆಗೆದುಕೊಳ್ಳೋಣ ಎಂದು ದುಷ್ಟಬುದ್ಧಿ ಸಲಹೆ ನೀಡುತ್ತಾನೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 23. | ದುಷ್ಟಬುದ್ಧಿಯು ತನ್ನ ತಂದೆಯನ್ನು ಸಾಕ್ಷಿಮಾಡಿ ಒಪ್ಪಿಸಿದ ಬಗೆಯನ್ನು ತಿಳಿಸಿ.<br>***ಉತ್ತರ :***<br>ದುಷ್ಟಬುದ್ಧಿಯು ತನ್ನ ಮನೆಗೆ ಬಂದು ತಂದೆಯ ಕೈಹಿಡಿದು ಏಕಾಂತಕ್ಕೆ ಕರೆದುಕೊಂಡು ಹೋಗಿ ನಡೆದ ವೃತ್ತಾಂತವನ್ನೆಲ್ಲಾ ತಿಳಿಸಿ. ‘‘ನಿಮ್ಮ ಒಂದು ಮಾತಿನಿಂದ ನಮ್ಮ ತೊಂದರೆಯೆಲ್ಲವೂ ಪರಿಹಾರವಾಗಿ ಹಸಿವಿಲ್ಲದೆ ತಿಂದುಂಡು ಸಂತೋಷವಾಗಿರಬಹುದು. ನೀವು ಆ ವೃಕ್ಷದಲ್ಲಿ ಅಡಗಿ ಕುಳಿತು ಧರ್ಮಬುದ್ಧಿಯೇ ಹೊನ್ನನ್ನೆಲ್ಲ ಕದ್ದನೆಂದು ಆ ಮರದ ಪೊಟರೆಯಲ್ಲಿ ಅಡಗಿ ಕುಳಿತು ಹೇಳಬೇಕೆಂದು ಹೇಳಿದಾಗ, ಆತನ ತಂದೆಯು ಪರರ ಹಣ ದೋಚುವುದು ವಿಶ್ವಾಸಘಾತಕ, ಸ್ವಾಮಿದ್ರೋಹ ಮಾಡಿದಂತೆ. ಇದೆಲ್ಲವೂ ಗೊತ್ತಿದ್ದೂ ನನ್ನನ್ನು ಸಾಕ್ಷಿ ಮಾಡಿ ಕೆಡಿಸಬೇಡ. ನಿನ್ನ ಈ ಕೆಲಸ ನಮ್ಮ ಕುಲ ಹಾಳು ಮಾಡುವ ಕೆಲಸ ಬೇಡವೆಂದರೂ, ನನ್ನ ತಂತ್ರವನ್ನು ಕೆಡಿಸದೆ ನಾನು ಹೇಳಿದಂತೆ ಕೇಳಬೇಕೆಂದು ತಂದೆಯನ್ನು ಒತ್ತಾಯದಿಂದ ಸಾಕ್ಷಿಗೆ ಒಪ್ಪಿಸಿದನು. | |
| 24. | ಸುಕುಮಾರಸ್ವಾಮಿಯು ಹೇಗೆ ಸುಖಭೋಗಗಳನ್ನು ಅನುಭವಿಸುತ್ತಿದ್ದನು ?<br>***ಉತ್ತರ :***<br>ಸೆಟ್ಟಿಪಟ್ಟವನ್ನು ತಂದೆಯಿಂದ ಪಡೆದುಕೊಂಡಿದ್ದ ಸುಕುಮಾರಸ್ವಾಮಿಯು ಯೌವನನಾಗಿ ಅತ್ಯಂತ ರೂಪ, ಲಾವಣ್ಯ, ಸೌಭಾಗ್ಯ ಕಾಂತಿಯಿಂದ ಕೂಡಿದ ಆತನಿಗ ಮೂವತ್ತೆರಡು ಬಳ್ಳಿ ಮಾಡಂಗಳ ಅತ್ಯಂತ ರೂಪ, ಲಾವಣ್ಯ, ಸೌಭಾಗ್ಯ, ಕಾಂತಿ, ಹಾವಭಾವ, ವಿಲಾಸ ವಿಭ್ರಮಂಗಳನೊಡೆಯ ದೇವಗಣಿಕೆಯರನ್ನು ಹೋಲುವ ಮೂವತ್ತೆರಡು ದಿವ್ಯ ಸ್ತ್ರೀಯರು ಮೂವತ್ತೆರಡು ನಾಟ್ಯಗಳು, ಮೂವತ್ತೆರಡು ಕೋಟಿ ಕಸವರಮಂ ಪಂಚರತ್ನಂಗಳಿಂದ ಕೂಡಿ ಸುಖಭೋಗಗಳನ್ನು ಅನುಭವಿಸುತ್ತಿದ್ದನು. | |
| 25. | ಲಾವಣಿಗಳನ್ನು ಏಕೆ ವೀರಗೀತೆಗಳು ಎನ್ನಲಾಗಿದೆ ?<br>***ಉತ್ತರ :***<br>‘ಲಾವಣಿ’ಗಳು ಜನಪದ ಸಾಹಿತ್ಯದ ಒಂದು ವಿಶಿಷ್ಟ ಪ್ರಕಾರ. ಲಾವಣಿಗಳು ವೀರತನ, ಸಾಹಸವನ್ನು ವರ್ಣಿಸುವುದರಿಂದ ‘ಲಾವಣಿಗಳು’ ಎಂದರೆ ‘ವೀರಗೀತೆಗಳು’ ಎಂದು ಕರೆಯುವುದು ವಾಡಿಕೆ. ಐತಿಹಾಸಿಕ ವಿವರಗಳನ್ನು ಅಭಿವ್ಯಕ್ತಿಸುವಲ್ಲಿ ಲಾವಣಿಗಳಿಗೆ ಪ್ರಮುಖಸ್ಥಾನ. ಲಾವಣಿಗಳು ವಸ್ತುನಿಷ್ಠವಾಗಿದ್ದು, ಗದ್ಯದ ಹೊಳಹನ್ನು ಭಾವಗೀತದ ಸತ್ವವನ್ನು ಹೊಂದಿರುವುದರ ಜೊತೆಗೆ ಧ್ವನಿರಮ್ಯತೆಯನ್ನು, ಅರ್ಥ ಸೌಂದರ್ಯವನ್ನು ಹೊಂದಿರುತ್ತವೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 26. | ವಾಲ್ಮೀಕಿ ಆಶ್ರಮಕ್ಕೆ ಯಜ್ಞಾಶ್ವವು ಬಂದ ಬಗೆಯನ್ನು ತಿಳಿಸಿ.<br>***ಉತ್ತರ :***<br>ಶ್ರೀರಾಮಚಂದ್ರನ ಯಜ್ಞಾಶ್ವವು ದೇಶದೇಶಗಳನ್ನು ಸುತ್ತಾಡುತ್ತಾ ಬಲಿಷ್ಠವಾದ ರಾಜರುಗಳು ಅದನ್ನು ಶ್ರೀರಾಮನ ಕುದುರೆಯೆಂದು ಅಂಜಿ ನಮಿಸಿ, ಕಪ್ಪಕಾಣಿಕೆಗಳನ್ನು ನೀಡುತ್ತಿದ್ದರು. ಹೀಗೆ ಎಲ್ಲಾ ರಾಜರುಗಳಿಂದಲೂ ಅಭಿನಂದಿಸಿಕೊಳ್ಳುತ್ತಾ ತನ್ನ ಹಣೆಯ ಮೇಲೆ "ಕೌಸಲ್ಯೆಯ ಕುವರ ಶ್ರೀರಾಮನೊಬ್ಬನೇ ವೀರನು. ಇದು ಆತನ ಯಜ್ಞದ ಕುದುರೆ, ಬಲಿಷ್ಠರಾದವರು ತಡೆಯಿರಿ" ಎನ್ನುವ ಒಕ್ಕಣಿಕೆಯ ಫಲಕವನ್ನು ಹೊತ್ತುಕೊಂಡು ಬರುತ್ತಿರುವ ಕುದುರೆ ಒಂದು ದಿನ ವಾಲ್ಮೀಕಿ ಆಶ್ರಮದತ್ತ ಬಂದಿತು. ಅಲ್ಲಿನ ಉದ್ಯಾನದಲ್ಲಿ ಹಸಿರು ಹುಲ್ಲು ತಿನ್ನಲು ಹೊಕ್ಕು ಅಲ್ಲಿನ ಉದ್ಯಾನವನದ ಹೂ, ಲತೆಗಳನ್ನು ಕಾಲ್ತುಳಿತದಿಂದ ತುಳಿಯುತ್ತಾ ಸಾಗುತ್ತಿರುವಾಗ, ಅದನ್ನು ಕಂಡ ಲವನು ಓಡಿ ಹೋಗಿ ಕುದುರೆಯನ್ನು ತಡೆಹಿಡಿಯುತ್ತಾನೆ. ಹೀಗೆ ಅಶ್ವಮೇಧದ ಕುದುರೆ ಆಶ್ರಮದತ್ತ ಬಂದಿತು. | |
| 27. | ದ್ರುಪದನು ದ್ರೋಣರಿಗೆ ಹೇಳಿದ ಮಾತುಗಳು ಯಾವುವು ?<br>***ಉತ್ತರ :***<br>ದ್ರೋಣ ಮತ್ತು ದ್ರುಪದರು ಸಹಪಾಠಿಗಳು, ಯಜ್ಞಸೇನನೆಂಬ ಗುರುವಿನಲ್ಲಿ ವಿದ್ಯಾಭ್ಯಾಸ ಮಾಡಿದವರು. ದ್ರುಪದನು ತಾನು ದೊರೆಯಾದಾಗ ತನ್ನ ಬಳಿಗೆ ಬಂದರೆ ಸಹಾಯ ಮಾಡುವುದಾಗಿ ಹೇಳಿದ್ದನ್ನು ಸ್ಮರಣೆಗೆ ತಂದುಕೊಂಡು ಆತನಲ್ಲಿಗೆ ಹೋದ ದ್ರೋಣರಿಗೆ ದ್ರುಪದನು, ಅವನು ಯಾರೆಂದು ನನಗೆ ಗೊತ್ತಿಲ್ಲ. ಅದು ಬರಿಯ ಭ್ರಮೆ, ದ್ರೋಣನೆಂಬುವವನು ಬ್ರಾಹ್ಮಣನೇ ? ಅಂತಹವನು ನನಗೆ ಗೆಳೆಯನೇ ಅಲ್ಲ. ಅವನನ್ನು ಈ ರಾಜಸಭೆಯಿಂದ ಹೊರನೂಕು ಎಂದು ಸೇವಕನಿಗೆ ಹೇಳಿದನು. | |
| 28. | ದ್ರುಪದನ ಮಾತಿಗೆ ದ್ರೋಣನ ಪ್ರತಿಕ್ರಿಯೆಯನ್ನು ತಿಳಿಸಿ.<br>***ಉತ್ತರ :***<br>ತಾನು ದೊರೆಯಾದಾಗ ತನ್ನ ಬಳಿಗೆ ಬಂದರೆ ಸಹಾಯ ಮಾಡುವುದಾಗಿ ದ್ರುಪದನು ವಿದ್ಯಾಭ್ಯಾಸದ ಸಮಯದಲ್ಲಿ ಹೇಳಿದ ಮಾತನ್ನು ನಂಬಿ ಹೋದ ದ್ರೋಣನನ್ನು ದ್ರುಪದನು, ದ್ರೋಣ ಯಾರೆಂಬುದು ನನಗೆ ಗೊತ್ತಿಲ್ಲ. ಅವನು ನನ್ನ ಗೆಳೆಯನೇ ಅಲ್ಲ ಎಂದಾಗ, ದ್ರೋಣನು ನಾವಿಬ್ಬರೂ ಒಬ್ಬರೇ ಗುರುಗಳ ಸಮ್ಮುಖದಲ್ಲಿ ವಿದ್ಯಾಭ್ಯಾಸ ಮಾಡಿದೆವು ಎಂಬುದು ನಿಮಗೆ ಗೊತ್ತಿಲ್ಲವೇ ಅಣ್ಣಾ. ಅಧಿಕಾರ ಮದದಿಂದ ಒಮ್ಮೊಮ್ಮೆ ನುಡಿ ತಪ್ಪುತ್ತದೆ. ಮುಖದಲ್ಲಿ ವಿಕಾರ ಉಂಟಾಗುತ್ತದ. ನಾಚಿಕೆಯಿಲ್ಲದೆ ಮಾತನಾಡುತ್ತಾರೆ. ಇದು ಸಿರಿಯೆಂಬ ಕಳ್ಳನ್ನು ಕುಡಿದವರ ಸ್ಥಿತಿ ಹೀಗಿರುತ್ತದೆ. ಆದ್ದರಿಂದ ಸಿರಿಯು ಕಳ್ಳಿನೊಡನೆ ಹುಟ್ಟಿತು ಎಂದು ದ್ರುಪದನ ಮಾತಿಗೆ ದ್ರೋಣನು ಪ್ರತಿಕ್ರಿಯಿಸುತ್ತಾನೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 29. | ಭಗತ್‌ಸಿಂಗನು ಅಂತರ್ಮುಖಿಯಾಗಲು ಕಾರಣವಾದ ಒಕ್ಕಣೆಯನ್ನು ತಿಳಿಸಿ.<br>*ಉತ್ತರ :*<br>"ಏಪ್ರಿಲ್-13-1919 ರಂದು ಬ್ರಿಟಿಷರ ಗುಂಡುಗಳಿಗೆ ಆಹುತಿಯಾದ ಸುಮಾರು 2000 ಮುಗ್ಧ ಹಿಂದೂ, ಸಿಖ್ ಮತ್ತು ಮುಸಲ್ಮಾನರ ಸಮ್ಮಿಳಿತ ರಕ್ತರಿಂದ ಈ ಪ್ರದೇಶ ಪಾವನವಾಗಿದೆ" ಎಂಬ ಜಲಿಯನ್ ವಾಲಾಬಾಗ್‌ನಲ್ಲಿರುವ ಒಕ್ಕಣೆ ಬಾಲಕ ಭಗತ್‌ಸಿಂಗನು ಅಂತರ್ಮುಖಿಯಾಗಲು ಕಾರಣವಾಯಿತು. | |
| 30. | ಮೃಗದ ಬಾಹ್ಯ ಆಕಾರ ಹೇಗಿತ್ತು ?<br>*ಉತ್ತರ :*<br>ಮೃಗದ ಬಾಹ್ಯ ಆಕಾರ ಭೀಕರವಾಗಿತ್ತು. ಕೋರೆ ಹಲ್ಲು, ಹಂದಿಯ ದೇಹ, ತೋಳದ ಚಲನೆಯನ್ನು ಪಡೆದಿದ್ದ ಮೃಗ, ಕರ್ಕಶ ಸದ್ದು, ಗೊಗ್ಗರು ಧ್ವನಿಯನ್ನು ಹೊಂದಿತ್ತು. | |
| 31. | ಜಾತಿ ವ್ಯವಸ್ಥೆಯ ಬಗ್ಗೆ ವಿವೇಕಾನಂದರ ಅಭಿಪ್ರಾಯವೇನು ?<br>*ಉತ್ತರ :*<br>ಜಾತಿ ವ್ಯವಸ್ಥೆಯ ಬಗೆಗೆ ಸ್ವಾಮಿ ವಿವೇಕಾನಂದರ ಅಭಿಪ್ರಾಯ; "ಜಾತಿ ಎಂಬುದು ಸಮಾಜದ ಒಂದು ಆಂತರಿಕ ಭಾಗವಾಗಿದೆ. ಹಿಂದೆ ಅದು ವಿಕಾಸವಾಗುತ್ತಿತ್ತು. ಈಗ ಅದು ಘನೀಭೂತವಾಗಿದೆ. ಅದರ ದುರ್ಗಂಧದಿಂದ ಭಾರತದ ವಾತಾವರಣವನ್ನೆಲ್ಲ ತುಂಬಿದೆ. ಜಾತಿ ವ್ಯವಸ್ಥೆಯ ಕ್ರೌರ್ಯಕ್ಕೆ ಶೂದ್ರರು, ಅಸ್ಪೃಶ್ಯರು ತುತ್ತಾಗಿ ಸ್ವಾತಂತ್ರ್ಯಹೀನರಾಗಿ ಗುಲಾಮತನ ಅನುಭವಿಸುವಂತಾಗಿದೆ. ಜಾತಿವಾದ ಮಾನವೀಯ ಮೌಲ್ಯವನ್ನು ನುಂಗಿ ನೊಣೆಯುತಿದೆ. ಸಮಾನತೆ ಕೈಕಟ್ಟಿಸಿಕೊಂಡಿದೆ. ಬಡವರ ಪರವಾದ ಆದ್ಯತೆಗಳು ಪಲ್ಲಟಗೊಳ್ಳುತ್ತಿವೆ". | |
| 32. | 'ಬೀಸುಕಲ್ಲು' ಎಂಬ ಉತ್ತರ ಬರಲು ಹೇಳಿದ ಒಗಟನ್ನು ಬರೆಯಿರಿ.<br>*ಉತ್ತರ :*<br>"ಬೀಸುಕಲ್ಲು" ಎಂಬ ಉತ್ತರ ಬರಲು ಹೇಳಿದ ಒಗಟು :<br>"ಬಗಲಲ್ಲಿ ಕುಕ್ಕುವುದು ಬಾಯಲ್ಲಿ ತಿಂಬೂದು<br>ನಂಗ್ಹೇಳಿ ಅರ್ತು ಈ ಹಾಡಿನ – ಹೇಳ್ದಿರೆ<br>ಕೈಗೆ ಹಲ್‌ಮುರು ಕೊಡುವೆನು" | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು :** | 6 × 3 = 18 |
| | ಕರ್ತೃ, ಆಕರ ಮತ್ತು ಪಠ್ಯದ ಹೆಸರು | 1 ಅಂಕ |
| | ಸಂದರ್ಭದ ವಿವರಣೆ | 1 ಅಂಕ |
| | ಸ್ವಾರಸ್ಯ ಮತ್ತು ಶೈಲಿ | 1 ಅಂಕ |
| | ಒಟ್ಟು | 3 ಅಂಕಗಳು |

33. "ಸಾಮಾಜಿಕ ಕಾನೂನುಗಳ ಹರಿಕಾರ"

***ಉತ್ತರ :***

***ಆಯ್ಕೆ :*** ಪ್ರಸ್ತುತ ಹೇಳಿಕೆಯನ್ನು ಡಿ.ಎಸ್. ಜಯಪ್ಪಗೌಡರು ಬರೆದ 'ದಿವಾನ್ ಸರ್ ಎಂ. ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು' ಎಂಬ ಕೃತಿಯಿಂದ ಆಯ್ದ 'ಭಾಗ್ಯಶಿಲ್ಪಿಗಳು' (1. ನಾಲ್ವಡಿ ಕೃಷ್ಣರಾಜ ಒಡೆಯರು, 2. ಸರ್ ಎಂ. ವಿಶ್ವೇಶ್ವರಯ್ಯ) ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

***ಸಂದರ್ಭ :*** ನಾಲ್ವಡಿ ಕೃಷ್ಣರಾಜ ಒಡೆಯರ ಆಳ್ವಿಕೆಯ ಕಾಲದಲ್ಲಿ ಮೈಸೂರು ಸಂಸ್ಥಾನವನ್ನು ಮಾದರಿ ಸಂಸ್ಥಾನವನ್ನಾಗಿ ರೂಪಿಸಿದ್ದಕ್ಕಾಗಿ ಲೇಖಕರು ಒಡೆಯರ್ ಅವರನ್ನು 'ಸಾಮಾಜಿಕ ಕಾನೂನುಗಳ ಹರಿಕಾರ' ಎಂದು ಹೆಸರಾಗಿದ್ದಾರೆ ಎಂದು ಹೇಳುತ್ತಾರೆ.

ಒಡೆಯರರು ಸ್ಥಳೀಯ ಸಂಸ್ಥೆಗಳನ್ನು ರಚಿಸಿ, ಆಡಳಿತ ವಿಕೇಂದ್ರೀಕರಣಕ್ಕೆ ಅನುವು ಮಾಡಿಕೊಟ್ಟರು. ನಗರಪಾಲಿಕೆ, ಗ್ರಾಮಪಂಚಾಯಿತಿಗಳು ಪ್ರಾರಂಭಗೊಂಡವು. ಇವರ ಕಾಲದಲ್ಲಿ ಗ್ರಾಮ ನಿರ್ಮಲೀಕರಣ ವಿದ್ಯಾಪ್ರಸಾರ, ನೀರು, ವೈದ್ಯಕೀಯ, ಸಾರಿಗೆ ಮುಂತಾದ ಕ್ಷೇತ್ರಗಳು ಸ್ವಯಂ ಆಡಳಿತದ ಕ್ಷೇತ್ರಗಳಾಗಿ ಮೈಸೂರು ಮಾದರಿ ಸಂಸ್ಥಾನವಾಗಿ ರೂಪುಗೊಂಡಿತು. ಸಾಹಿತ್ಯ, ಸಂಗೀತ, ಕಲೆಗಳ ಅಭಿವೃದ್ಧಿಗೂ ಒತ್ತು ನೀಡಿದ್ದರು.

***ಸ್ವಾರಸ್ಯ :*** ನಾಲ್ವಡಿ ಕೃಷ್ಣರಾಜ ಒಡೆಯರು ಒಬ್ಬ ಸಮರ್ಥ ಆಡಳಿತಗಾರರಾಗಿದ್ದರು. ಅವರ ದೂರದೃಷ್ಟಿ, ಜನಪರ ಕೆಲಸಗಳು, ಅವರು ನಾಡು–ನುಡಿಗೆ ಸಲ್ಲಿಸಿದ ಸೇವೆ ಅವರನ್ನು ಸ್ಮರಣೀಯರನ್ನಾಗಿಸಿದೆ.

34. "ಹಾಗಾದರೆ ಎಲ್ಲರಿಗೂ ಮನೆ ಆಗುವವರೆಗೆ ನನಗೂ ಮನೆ ಬೇಡ"

***ಉತ್ತರ :***

***ಆಯ್ಕೆ :*** ಪ್ರಸ್ತುತ ಹೇಳಿಕೆಯನ್ನು ದೇವನೂರ ಮಹಾದೇವರವರು ವಿರಚಿಸಿರುವ 'ಎದೆಗೆ ಬಿದ್ದ ಅಕ್ಷರ' ಎಂಬ ವೈಚಾರಿಕ ಲೇಖನಗಳ ಸಂಕಲನದಿಂದ ಆಯ್ದುಕೊಂಡ 'ಎದೆಗೆ ಬಿದ್ದ ಅಕ್ಷರ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ***ಸಂದರ್ಭ :*** ಒಮ್ಮೆ ದಲಿತ ಕವಿ ಸಿದ್ದಲಿಂಗಯ್ಯನವರು ಹೇಳಿದ ಮನೆಮಂಚಮ್ಮನ ಕಥೆಯಲ್ಲಿ ಮನೆಮಂಚಮ್ಮನೆಂಬ ಗ್ರಾಮದೇವತೆಗೆ ಗ್ರಾಮಸ್ಥರೆಲ್ಲ ಸೇರಿ ಗುಡಿಯೊಂದನ್ನು ಕಟ್ಟಲು ಆರಂಭಿಸುತ್ತಾರೆ. ಹೀಗೆ ಗುಡಿಯನ್ನು ಕಟ್ಟುವ ಸಂದರ್ಭದಲ್ಲಿ ಅದು ಚಾವಣಿಯ ಹಂತಕ್ಕೆ ಬಂದಾಗ ಒಬ್ಬನ ಮೇಲೆ ಆ ದೇವತೆ ಆವಾಹನೆಗೊಂಡು ಈ ಮಾತನ್ನು ಜನರಿಗೆ ಹೇಳುತ್ತಾಳೆ. | |
| | ***ಸ್ವಾರಸ್ಯ :*** ಜನಸಾಮಾನ್ಯರಿಗೆ ಮನೆ ಇಲ್ಲದಿರುವಾಗ ನನಗೇಕೆ ಮನೆ ಎಂಬ ಭಾವನೆಯು, ಮನೆಮಂಚಮ್ಮನ ಸಮತೆ ಮತ್ತು ಕಾರುಣ್ಯ ತುಂಬಿದ ಹೃದಯ ಶ್ರೀಮಂತಿಕೆ ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ. | |
| 35. | "ರಿಸಿಯರ ರೂಪಂ ಕಾಣ್ಗುಮಂದೀತನುಂ ತಪಂಬಡುಗುಮ್" | |
| | ***ಉತ್ತರ :*** | |
| | ***ಆಯ್ಕೆ :*** ಪ್ರಸ್ತುತ ಹೇಳಿಕೆಯನ್ನು ಡಾ. ಡಿ.ಎಲ್. ನರಸಿಂಹಾಚಾರ್ ಅವರು ಸಂಪಾದಿಸಿದ 'ಶಿವಕೋಟ್ಯಾಚಾರ್ಯ' ವಿರಚಿತ 'ವಡ್ಡಾರಾಧನೆ' ಕೃತಿಯಿಂದ ಆಯ್ದ 'ಸುಕುಮಾರಸ್ವಾಮಿಯ ಕಥೆ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ. | |
| | ***ಸಂದರ್ಭ :*** ಸುಕುಮಾರಸ್ವಾಮಿ ಯೌವನನಾಗಿ, ರೂಪ, ಲಾವಣ್ಯ ಸೌಭಾಗ್ಯ ಕಾಂತಿಯಿಂದ ಕೂಡಿದ ಆತನು ಮೂವತ್ತೆರಡು ದಿವ್ಯಸ್ತ್ರೀಯರು, ಮೂವತ್ತೆರಡು ನಾಟ್ಯಗಳು, ಮೂವತ್ತೆರಡು ಕೋಟಿ ಕಸವರ, ಪಂಚರತ್ನಗಳಿಂದ ಕೂಡಿ ಸುಖಭೋಗಗಳನ್ನು ಅನುಭವಿಸುತ್ತಿರುವ ಸಂದರ್ಭದಲ್ಲಿ ಓರ್ವ ಜೋಯಿಸನು ಈ ಮಾತನ್ನು ಹೇಳುತ್ತಾನೆ.<br><br>ಸುಖಭೋಗಗಳಲ್ಲಿ ತೇಲಾಡುತ್ತಿರುವ ಸುಕುಮಾರ ಸ್ವಾಮಿಯು ರಿಸಿಯರ ರೂಪವನ್ನು ಕಂಡ ದಿನವೇ ತಪಸ್ಸಿಗೆ ತೊಡಗುತ್ತಾನೆ ಎನ್ನುವ ಮಾತು ಆತನ ತಾಯಿಗೆ ರುಚಿಸುವುದಿಲ್ಲ. ಕಾರಣ ಆತನ ಕಣ್ಣಿಗೆ ಋಷಿಗಳು ಬೀಳದಂತೆ ಎಚ್ಚರಿಕವಹಿಸುತ್ತಾಳೆ. | |
| | ***ಸ್ವಾರಸ್ಯ :*** ಬದುಕು ಯಾವಾಗ ಭೋಗ ವಿಲಾಸಗಳಲ್ಲಿ ಮುಳುಗುತ್ತದೆ. ಯಾವಾಗ ವೈರಾಗ್ಯದತ್ತ ಹೊರಳುತ್ತದೆ ಎಂಬುದು ತಿಳಿಯುವುದಿಲ್ಲ ಎಂಬುದೇ ಇಲ್ಲಿನ ಸ್ವಾರಸ್ಯವಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 36. | "ಮಂಗಳ ಲೋಕದ ಅಂಗಳಕೇರಿ"<br>***ಉತ್ತರ :***<br>***ಆಯ್ಕೆ :*** ಪ್ರಸ್ತುತ ಹೇಳಿಕೆಯನ್ನು ಕವಿ ದ.ರಾ. ಬೇಂದ್ರೆಯವರು ವಿರಚಿಸಿದ 'ಗರಿ' ಎಂಬ ಕವನಸಂಕಲನದಿಂದ ಆಯ್ದ 'ಹಕ್ಕಿ ಹಾರುತಿದೆ ನೋಡಿದಿರಾ' ಎಂಬ ಕವಿತೆಯಿಂದ ಆಯ್ದುಕೊಳ್ಳಲಾಗಿದೆ.<br>***ಸಂದರ್ಭ :*** ಚಲನಶೀಲತೆ ಜೀವಂತಿಕೆಯ ಗುಣ, ನಿಸರ್ಗದ ಹೊಂದಾಣಿಕೆಯಂತೆ ಕಾಲ ಉರುಳುತ್ತದೆ. ಕವಿ ಕಾಲದ ಗತಿಯನ್ನು ಹಾರುವ ಹಕ್ಕಿಯೊಂದಿಗೆ ಸಮೀಕರಿಸಿ ನೋಡುವ ಪ್ರಯತ್ನ ಮಾಡಿದ್ದಾರೆ. ಹಕ್ಕಿಯ ಹಾರುವಿಕೆ ಪ್ರಕೃತಿಯ ಸಹಜ ಕ್ರಿಯೆಯೊಂದಿಗೆ ಯುಗಗಳೇ ಉರುಳಿ ಹೊಸತನಕ್ಕೆ ತೆರೆದುಕೊಳ್ಳುವ ಸಂಕೇತವಾಗಿದೆ. ಶುಕ್ರ, ಚಂದ್ರ, ಮಂಗಳ ಲೋಕ ಸಂಚಾರ ಕಾಲದ ಒಂದು ಭೌತಿಕ ಲಕ್ಷಣ. ಬ್ರಿಟಿಷರ ಸಾಮ್ರಾಜ್ಯಶಾಹಿಯಿಂದ ಪಾರಾಗುವ ಸ್ವಾತಂತ್ರ್ಯ ಚಿಂತನದ ಕಲ್ಪನಾ ಪಕ್ಷಿಯ ಹಾರಾಟವು ಇನ್ನೊಂದು ಲಕ್ಷಣ. ಇದಲ್ಲದೆ ಮಂಗಳ ಲೋಕದ ಅಂಗಳಕ್ಕೆ ಮಾನವನು ಏರುವ ಸೂಚನೆಯನ್ನು ನೀಡುವ ಸಂದರ್ಭದಲ್ಲಿ ಕವಿ ಈ ಮಾತನ್ನು ಹೇಳುತ್ತಾರೆ.<br>***ಸ್ವಾರಸ್ಯ :*** ಕಾಲ ಪಕ್ಷಿಯ ಹೊಡೆತಕ್ಕೆ ಮಾನವ ಪ್ರಪಂಚದಲ್ಲಿ ಹೊಸ ವೈಚಿತ್ರ್ಯ ವಿಸ್ಮಯಗಳು ಜರುಗುತ್ತಿರುತ್ತವೆ ಎಂಬುದು ಇಲ್ಲಿನ ಸ್ವಾರಸ್ಯವಾಗಿದ. | |
| 37. | "ಹೊಡೆದರೊ ಗುಂಡ ಕರುಣ ಇಲ್ಲದ್ಹಂಗ"<br>***ಉತ್ತರ :***<br>***ಆಯ್ಕೆ :*** ಪ್ರಸ್ತುತ ಹೇಳಿಕೆಯನ್ನು ಡಾ. ಬಿ.ಎಸ್. ಗದ್ದಗಿಮಠ ಅವರ 'ಕನ್ನಡ ಜನಪದ ಗೀತೆಗಳು' ಎಂಬ ಕೃತಿಯಿಂದ ಆಯ್ದು ಸಂಪಾದಿಸಿದ 'ಹಲಗಲಿಯ ಬೇಡರು' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.<br>***ಸಂದರ್ಭ :*** 1857 ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಅನಂತರ ಭಾರತೀಯರ ಮೇಲೆ ನಿಶ್ಶಸ್ತ್ರೀಕರಣದ ಹುಕುಮ್ಮನ್ನು ಹೊರಡಿಸಿದರು. ಸರ್ಕಾರದ ಅನುಮತಿಯಿಲ್ಲದೆ ಭಾರತೀಯರು ಶಸ್ತ್ರಾಸ್ತ್ರಗಳನ್ನು ಹೊಂದುವಂತಿರಲಿಲ್ಲ ಮತ್ತು ತಮ್ಮಲ್ಲಿರುವ ಆಯುಧಗಳನ್ನೆಲ್ಲಾ ಸರ್ಕಾರಕ್ಕೆ ಒಪ್ಪಿಸಬೇಕು. ಹಲಗಲಿಯ ವೀರರು ಆಯುಧಗಳನ್ನು ಒಪ್ಪಿಸಲೊಲ್ಲದೆ ಬ್ರಿಟಿಷ್ ಅಧಿಕಾರಿಗಳ ವಿರುದ್ಧ ದಂಗೆ ಎದ್ದು ಅಧಿಕಾರಿಯನ್ನೇ ಕೊಲೆಗೈದರು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಇದರಿಂದ ಕ್ರೋಧಗೊಂಡ 'ಕಾರ' ಸಾಹೇಬ ಹಲಗಲಿಗೆ ಮುತ್ತಿಗೆ ಹಾಕಿಸಿ ಧ್ವಂಸ ಮಾಡಿ ಎಳ್ಳಷ್ಟು ಗುರುತು ಉಳಿಯದಂತೆ ಬೆನ್ನಬೆನ್ಹತ್ತಿ ತಿರಿತಿರ್ವಿ ಏನೂ ಉಳಿಯದ ಹಾಗೆ ನಾಮಾವಶೇಷ ಮಾಡಿದ ಸಂದರ್ಭವನ್ನು ಕಥಾನಕವಾಗಿ ವರ್ಣಿಸುವ ಸಂದರ್ಭದಲ್ಲಿ ಲಾವಣಿಕಾರನು ಈ ಮಾತನ್ನು ಹೇಳಿದ್ದಾನೆ. | |
| | ***ಸ್ವಾರಸ್ಯ :*** ಬ್ರಿಟಿಷ್ ಅಧಿಕಾರಿಗಳ ದರ್ಪ, ದೌರ್ಜನ್ಯ, ತಿರುಗಿಬಿದ್ದವರ ಮೇಲೆ ಕೈಗೊಂಡಕ್ರಮ, ಅದನ್ನು ವಿರೋಧಿಸಿದ ಹಲಗಲಿ ವೀರರ ಕೆಚ್ಚೆದೆಯ ಪ್ರತಿಭಟನೆ ಸ್ವಾರಸ್ಯಕರವಾಗಿ ಮೂಡಿಬಂದಿದೆ. | |
| 38. | "ತನ್ನ ಮಾತೆಯಂ ಸರ್ವಜನಮುಂ ಬಂಜೆಯೆನ್ನದಿರ್ದಪುದೆ" | |
| | ***ಉತ್ತರ :*** | |
| | ***ಆಯ್ಕೆ :*** ಪ್ರಸ್ತುತ ಹೇಳಿಕೆಯನ್ನು ದೇವುಡು ನರಸಿಂಹಶಾಸ್ತ್ರಿ ಮತ್ತು ಬಿ. ಶಿವಮೂರ್ತಿಶಾಸ್ತ್ರಿ ಇವರು ಸಂಪಾದಿಸಿರುವ 'ಲಕ್ಷ್ಮೀಶ' ಕವಿ ವಿರಚಿತ 'ಜೈಮಿನಿ ಭಾರತ' ಕಾವ್ಯದ 20ನೆಯ ಸಂಧಿಯಿಂದ ಆಯ್ದ 'ವೀರಲವ' ಎಂಬ ಪದ್ಯಪಾಠದಿಂದ ಆಯ್ದುಕೊಳ್ಳಲಾಗಿದೆ. | |
| | ***ಸಂದರ್ಭ :*** ಶ್ರೀರಾಮನ ಅಶ್ವಮೇಧದ ಕುದುರೆ ದೇಶದೇಶಗಳನ್ನು ಸುತ್ತಾಡಿ, ಬಲಿಷ್ಠ ರಾಜರೆಲ್ಲರಿಂದಲೂ ಕಪ್ಪ ಕಾಣಿಕೆಗಳನ್ನು ಪಡೆಯುತ್ತಾ ಒಂದು ದಿನ ವಾಲ್ಮೀಕಿ ಆಶ್ರಮದ ಉಪವನವನ್ನು ಹೊಕ್ಕು ಅಲ್ಲಿನ ಹಸಿರು ಹುಲ್ಲಿಗಾಗಿ ಹೂ ಲತೆಗಳನ್ನು ಧ್ವಂಸಗೊಳಿಸುತ್ತಾ ಇರುವುದನ್ನು ಕಂಡ ಲವನು ಅದನ್ನು ತಡೆಯಲು ಹೋದ. ಲವನು ಕುದುರೆಯ ಹಣೆಯ ಮೇಲೆ ಒಕ್ಕಣಿಕೆಯ ಫಲಕದಲ್ಲಿರುವ 'ಶ್ರೀರಾಮನೊಬ್ಬನೇ ವೀರನು, ಇದು ಆತನ ಯಜ್ಞದ ಕುದುರೆ, ಶಕ್ತಿವಂತರಾದವರು ಹಿಡಿದು ತಡೆಯಬಹುದು' ಎಂಬ ನುಡಿಗಳನ್ನು ಕಂಡು. ಈ ಗರ್ವವನ್ನು ಬಿಡಿಸುವೆನು. ಗರ್ವವನ್ನು ಬಿಡಿಸದೇ ಇದ್ದರೆ, ನನ್ನ ತಾಯಿಯನ್ನು ಸರ್ವಜನರು ಬಂಜೆಯೆನ್ನದೇ ಇರುವರೇ ಎನ್ನುವ ಸಂದರ್ಭದಲ್ಲಿ ಲವನು ಈ ಮಾತನು ಉದ್ಗರಿಸುತ್ತಾನೆ. | |
| | ***ಸ್ವಾರಸ್ಯ :*** ಲವಕುಶರು ಹುಟ್ಟಿದ್ದು ಆಶ್ರಮದಲ್ಲಾದರೂ ಅವರಲ್ಲಿನ ಸಹಜ ಕ್ಷಾತ್ರಗುಣ, ವೀರತೆಯಿಂದ ಕುದುರೆಯನ್ನು ಕಟ್ಟಿಹಾಕುವುದು. ಕಷ್ಟಸವಾಲುಗಳು ಬಂದಾಗ ಚಿಕ್ಕವರು, ಅಸಮರ್ಥರು ಎಂದು ಕೂರದೆ ದಿಟ್ಟತನದಿಂದ ಎದುರಿಸಬೇಕು ಎಂಬುದು ಸ್ವಾರಸ್ಯಕರವಾಗಿ ಮೂಡಿಬಂದಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ಸಾಹಿತಿ / ಕವಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿ / ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :** | 2 × 3 = 6 |
| | ಜನ್ಮಸ್ಥಳ, ಕಾಲ | 1 ಅಂಕ |
| | ಕೃತಿ, ಪ್ರಶಸ್ತಿ/ಬಿರುದು | 1 ಅಂಕ |
| | ವಾಕ್ಯರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 39. | ಕುವೆಂಪು :<br>***ಉತ್ತರ :***<br>'ಕುವೆಂಪು' ಎಂಬ ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ ಅವರು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ಸಮೀಪದ ಕುಪ್ಪಳಿಯವರು. ಜನನ 1904 ಡಿಸೆಂಬರ್ 29 ರಂದು. ಆಧುನಿಕ ಕನ್ನಡ ಸಾಹಿತ್ಯದ ಕವಿಗಳಲ್ಲಿ ಅಗ್ರಗಣ್ಯರಾದ ಕುವೆಂಪು ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿಯೂ ಕೃತಿ ರಚಿಸಿದ್ದಾರೆ. ಅವರ ಪ್ರಮುಖ ಕೃತಿಗಳು : ಶ್ರೀರಾಮಾಯಣದರ್ಶನಂ, ಕಾನೂರು ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು, ಕೊಳಲು, ಪಕ್ಷಿಕಾಶಿ, ತಪೋನಂದನ, ಬೊಮ್ಮನಹಳ್ಳಿಯ ಕಿಂದರಿಜೋಗಿ, ಯಮನ ಸೋಲು, ನೆನಪಿನ ದೋಣಿಯಲ್ಲಿ; ಮುಂತಾದವುಗಳು.<br>ಅವರಿಗೆ ಭಾರತೀಯ ಜ್ಞಾನಪೀಠ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ರಾಷ್ಟ್ರಕವಿ, ಪಂಪ ಪ್ರಶಸ್ತಿ, ಪದ್ಮವಿಭೂಷಣ, ಕರ್ನಾಟಕ ರತ್ನ, ಹಲವು ವಿ.ವಿ.ಗಳಿಂದ ಗೌರವ ಡಾಕ್ಟರೇಟ್ ಪದವಿಗಳನ್ನು ಪಡೆದುಕೊಂಡಿರುವ ಇವರು ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಗೌರವವನ್ನು ಪಡೆದುಕೊಂಡಿದ್ದಾರೆ.<br>ಮಹಾರಾಜಾ ಕಾಲೇಜಿನ ಪ್ರಾಧ್ಯಾಪಕರಾಗಿ, ಪ್ರಿನ್ಸಿಪಾಲರಾಗಿ, ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿ ಅಮೂಲ್ಯವಾದ ಸೇವೆಯನ್ನು ಮಾಡಿ ಜನಮಾನಸದಲ್ಲಿ ಅಚ್ಚಳಿಯದೇ ಉಳಿದಿದ್ದಾರೆ. | |
| 40. | ಸಾರಾ ಅಬೂಬಕ್ಕರ್ :<br>***ಉತ್ತರ :***<br>ಲೇಖಕಿಯರಾದ ಸಾರಾ ಅಬೂಬಕ್ಕರ್ ಅವರು 30 ಜೂನ್ 1936 ರಂದು ಕಾಸರಗೋಡಿನಲ್ಲಿ ಜನಿಸಿದ್ದಾರೆ. ಮಹಿಳೆಯರು ಸಾಹಿತ್ಯ ರಚನೆಯಲ್ಲಿ ತೊಡಗಿಸಿಕೊಳ್ಳುವುದು ಅಪರೂಪ ಎನ್ನುವ ಸಂದರ್ಭದಲ್ಲಿ ಬರವಣಿಗೆಯನ್ನು ಪ್ರಾರಂಭಿಸಿದ ಇವರು ಇಂದು ನಾಡಿನ ಖ್ಯಾತ ಕಥೆಗಾರ್ತಿ ಹಾಗೂ ಕಾದಂಬರಿಗಾರ್ತಿಯಾಗಿ ಜನಪ್ರಿಯತೆಯನ್ನು ಗಳಿಸಿದ್ದಾರೆ.<br>ಅವರ ಪ್ರಮುಖ ಕೃತಿಗಳು : ಚಂದ್ರಗಿರಿಯ ತೀರದಲ್ಲಿ, ಸಹನಾ, ಕದನ ವಿರಾಮ, ವಜ್ರಗಳು, ಸುಳಿಯಲ್ಲಿ ಸಿಕ್ಕವರು, ತಳ ಒಡೆದ ದೋಣಿಯಲಿ ಮೊದಲಾದವು ಪ್ರಮುಖ ಕಾದಂಬರಿಗಳಾಗಿವೆ. ಚಪ್ಪಲಿಗಳು, ಖೆಡ್ಡಾ, ಅರ್ಧರಾತ್ರಿಯಲ್ಲಿ ಹುಟ್ಟಿದ ಕೂಸು, ಪಯಣ ಇವು ಇವರ ಕಥಾ ಸಂಕಲನಗಳು.<br>ಇವರು ಕನ್ನಡ ಸಾಹಿತ್ಯ ಪರಿಷತ್ತಿನ 'ನೃಪತುಂಗ ಪ್ರಶಸ್ತಿ'ಗೆ ಪಾತ್ರರಾಗಿರುವರು. ಅಲ್ಲದೆ ಅನೇಕ ಪ್ರಶಸ್ತಿಗಳು ಇವರಿಗೆ ಸಂದಿವೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 41. | **ಪದ್ಯಭಾಗ ಪೂರ್ಣ ಮಾಡುವುದು : (ತಪ್ಪಿಲ್ಲದೇ ಬರೆದ ಪ್ರತಿ ಪೂರ್ಣಸಾಲಿಗೆ 1 ಅಂಕ)**<br>ಮಾರಿಗೌತಣವಾಯ್ತು ನಾಳಿನ<br>..........................................................................<br>..........................................................................<br>..........................................................................<br>..........................................................................<br>ವೀರರ್ಕೈವರ ನೋಯಿಸೆನು ರಾಜೀವಸಖನಾಣೆ<br>**ಅಥವಾ**<br>ಕೊರಳ ಸೆರೆ ಹಿಗ್ಗಿದವು ದೃಗುಜಲ<br>..........................................................................<br>..........................................................................<br>..........................................................................<br>..........................................................................<br>ನರುಹಿ ಕೊಂದನು ಹಲವು ಮಾತೇನೆಂದು ಚಿಂತಿಸಿದ<br>***ಉತ್ತರ :***<br>ಮಾರಿಗೌತಣವಾಯ್ತು ನಾಳಿನ<br>ಭಾರತವು ಚತುರಂಗ ಬಲದಲಿ<br>ಕೌರವನ ಋಣ ಹಿಂಗೆ ರಣದಲಿ ಸುಭಟಕೋಟಿಯನು<br>ತೀರಿಸಿಯೆ ಪತಿಯವಸರಕ್ಕೆ ಶ<br>ರೀರವನು ನೂಕುವೆನು ನಿನ್ನಯ<br>ವೀರರ್ಕೈವರ ನೋಯಿಸೆನು ರಾಜೀವಸಖನಾಣೆ<br>**ಅಥವಾ**<br>ಕೊರಳ ಸೆರೆ ಹಿಗ್ಗಿದವು ದೃಗುಜಲ<br>ಉರವಣಿಸಿ ಕಡು ನೊಂದನಕಟಾ<br>ಕುರುಪತಿಗೆ ಕೇಡಾದುದೆಂದನು ತನ್ನ ಮನದೊಳಗೆ<br>ಹರಿಯ ಹಗೆ ಹೊಗೆದೋರದುರುಹದೆ<br>ಬರಿದೆ ಹೋಹುದೆ ತನ್ನ ವಂಶವ<br>ನರುಹಿ ಕೊಂದನು ಹಲವು ಮಾತೇನೆಂದು ಚಿಂತಿಸಿದ | 1 × 4 = 4 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 42. | **ಪದ್ಯಭಾಗವನ್ನು ಓದಿ, ಅರ್ಥಮಾಡಿಕೊಂಡು, ಮೌಲ್ಯವನ್ನಾಧರಿಸಿ ಸಾರಾಂಶ ಬರೆಯುವುದು :** | $1 \times 4 = 4$ |
| | ವಿಷಯಾಂಶಕ್ಕೆ | 3 ಅಂಕಗಳು |
| | ಅಡಕಗೊಂಡ ಮೌಲ್ಯ ಗುರುತಿಸುವುದು, ಪದಬಂಧ ಮತ್ತು ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| | ಸುತ್ತಲು ಕವಿಯುವ ಕತ್ತಲೆಯೊಳಗೆ<br>ಪ್ರೀತಿಯ ಹಣತೆಯ ಹಚ್ಚೋಣ<br>ಬಿರುಗಾಳಿಗೆ ಹೊಯ್ದಾಡುವ ಹಡಗನು<br>ಎಚ್ಚರದಲಿ ಮುನ್ನಡೆಸೋಣ. | |
| | ***ಉತ್ತರ :*** | |
| | ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ ಅವರು 'ಸಂಕಲ್ಪಗೀತೆ' ಎಂಬ ಭಾವಗೀತೆಯಲ್ಲಿ ದೃಢಸಂಕಲ್ಪದಿಂದ ಏನೇನನ್ನು ಸಾಧಿಸಬಹುದೆಂಬುದನ್ನು ಸರಳವಾಗಿ, ಸುಂದರವಾಗಿ ಅಭಿವ್ಯಕ್ತಿಸಿದ್ದಾರೆ. | |
| | "ಹಿಂದೆ ಗುರುವಿದ್ದ, ಮುಂದೆ ಗುರಿಯಿತ್ತು, ಸಾಗುತ್ತಿತ್ತು ಧೀರರ ದಂಡು" ಎಂಬ ವಾಕ್ಯವು ಹಿಂದಿನ ತಲೆಮಾರಿನ ಯುವಕರಿಗಿದ್ದ ನೆಲೆಯನ್ನು ತಿಳಿಸುತ್ತದೆ. ಹೋಗಬೇಕಾದ ದಾರಿ ತಲುಪಬೇಕಾದ ಗುರಿ ಸ್ಪಷ್ಟವಾಗಿರಬೇಕು ಎಂಬುದನ್ನು ತಿಳಿಸುತ್ತದೆ. ಜೀವನದಲ್ಲಿ ಧನಾತ್ಮಕ ಭಾವನೆಯನ್ನು, ದೃಢಸಂಕಲ್ಪವನ್ನು ಹೊಂದಿರಬೇಕು. ಯಾವುದೇ ರೀತಿಯ ಸವಾಲುಗಳು ಎದುರಾದಾಗಲೂ ಆತ್ಮವಿಶ್ವಾಸದ ಸಂಕಲ್ಪ ನಿಷ್ಠೆಯಿಂದ ಕ್ರಿಯಾಶೀಲರಾದಾಗ ಯಶಸ್ಸು ಲಭಿಸುತ್ತದೆ. ಭೇದಭಾವಗಳನ್ನು ಹೋಗಲಾಡಿಸಿಕೊಳ್ಳುತ್ತಾ ಐಕ್ಯದಿಂದ ಪ್ರಯತ್ನಶೀಲರಾದಾಗ ನಮ್ಮ ಬಲವರ್ಧಿಸುತ್ತದೆ. ಭಯ ಮತ್ತು ಅನುಮಾನ ಆವರಿಸಿರುವ ನಮ್ಮ ಸಮಾಜವನ್ನು ದೃಢನಿಷ್ಠೆಯಿಂದ ಸ್ವಾಸ್ಥ್ಯದ ನೆಲೆಯಾಗಿಸುವ ಹಣತೆಯನ್ನು ಹಚ್ಚಿದಾಗ ಸುತ್ತಲಿನ ಅಜ್ಞಾನ, ಅಂಧಕಾರದ ಕತ್ತಲೆ ದೂರವಾಗುತ್ತದೆ. ಅದಕ್ಕಾಗಿ ನಾವೆಲ್ಲರೂ ಪ್ರೀತಿಯ ಹಣತೆಯನ್ನು ಹಚ್ಚೋಣ. ಬಿರುಗಾಳಿಗೆ ಹೊಯ್ದಾಡುತ್ತಿರುವ ನಮ್ಮ ಬದುಕೆಂಬ, ಸಮಾಜವೆಂಬ ಹಡಗನ್ನು ಬೆಳಕಿನಲ್ಲಿ ಎಚ್ಚರದಿಂದ ಮುನ್ನಡೆಸಿಕೊಂಡು ದಡ ಸೇರೋಣ ಎಂಬುದೇ ಪ್ರಸ್ತುತ ಪದ್ಯಭಾಗದ ಮೌಲ್ಯವಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 43. | **ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :** | 2 × 4 = 8 |
| | ಅಂಶಗಳನ್ನಾಧರಿಸಿ ಪತ್ಯಾಂಶಕ್ಕೆ | 3 ಅಂಕಗಳು |
| | ಭಾಷಾಶೈಲಿಗೆ, ಪದಬಂಧಗಳಿಗೆ | 1 ಅಂಕ |
| | ಒಟ್ಟು | 4 ಅಂಕಗಳು |

ನಂಬಿಕೆಟ್ಟವರಿಲ್ಲ ಎಂಬ ಮಾತು ಶಬರಿಯ ಪಾಲಿಗೆ ಹೇಗೆ ನಿಜವಾಗಿದೆಯೆಂಬುದನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

**ಅಥವಾ**

ಶಬರಿಯ ಸಡಗರ, ಸಂತೋಷ ಮೇಳದವರ ಹಾಡಿನಲ್ಲಿ ಹೇಗೆ ವರ್ಣಿತವಾಗಿದೆ ?

***ಉತ್ತರ :***

ರಾಮಾಯಣ ಮಹಾಕಾವ್ಯವು ಭಾರತೀಯರ ಪವಿತ್ರ ಗ್ರಂಥಗಳಲ್ಲಿ ಒಂದು. ಶ್ರೀರಾಮನ ಗುಣಸ್ವಭಾವಗಳ ಸೆಳೆತಕ್ಕೆ ಸಿಕ್ಕಿ ಅವನನ್ನು ಕಾಣುವುದೇ ಜೀವನದ ಏಕೈಕ ಗುರಿ ಎಂದು ಭಾವಿಸಿದ್ದ ಅಸಂಖ್ಯಾತ ಭಕ್ತರಲ್ಲಿ ಶಬರಿಯೂ ಒಬ್ಬಳು. ಈಕೆ ಮತಂಗ ಋಷಿಯ ಆಶ್ರಮದಲ್ಲಿದ್ದಳು. ಮತಂಗರು ದಿವ್ಯಲೋಕವನ್ನು ಸೇರಿದ ಬಳಿಕ ಈಕೆ ರಾಮಧ್ಯಾನದಲ್ಲಿ ತೊಡಗಿ ರಾಮನ ದರ್ಶನಕ್ಕಾಗಿ ಕಾದಿದ್ದಳು. ತನ್ನ ಆರಾಧ್ಯ ಪುರುಷನ ದರ್ಶನ ಇಂದಲ್ಲ ನಾಳೆ ಮುಂದೊಂದು ದಿವಸ ದೊರೆತೇ ದೊರೆಯುತ್ತದೆ ಎಂಬ ನಂಬಿಕೆಯನ್ನು ಇಟ್ಟುಕೊಂಡ ಶ್ರಮಣಿ ಶಬರಿ ಸದಾ ಕಡುಸವಿಯಾದ ಹಣ್ಣುಗಳನ್ನು ಮಧುಪರ್ಕವನ್ನು, ತಳಿರು ಹೂಗಳನ್ನು ತಲೆಕಂಕುಳಲ್ಲಿಟ್ಟುಕೊಂಡು ಪ್ರತಿದಿನ ಶ್ರೀರಾಮನಿಗಾಗಿ ಆ ಸವಿಯಾದ ಹೂ ಹಣ್ಣುಗಳನ್ನು ಅರ್ಪಿಸಿ ಧನ್ಯಳಾಗಲು ಕಾತುರದಿಂದ ಅವರ ನಿರೀಕ್ಷಣೆಯಲ್ಲಿ ಇರುತ್ತಿರುತ್ತಾಳೆ. ಶಬರಿಯ ಮುಗ್ಧತೆ, ಅವಳ ಹಂಬಲಿಕೆಯಂತೆ ಶ್ರೀರಾಮಲಕ್ಷ್ಮಣರು ಸೀತಾಪಹರಣದ ಅನಂತರ ಶೋಕತಪ್ತರಾಗಿ ಸೀತೆಯನ್ನು ಹುಡುಕುತ್ತಿರುವಾಗ ತಪಸ್ವಿಯಾದ 'ದನು' ಎಂಬುವರ ಸೂಚನೆಯಂತೆ ಮತಂಗಾಶ್ರಮವನ್ನು ಪ್ರವೇಶಿಸುತ್ತಾರೆ, ಅಲ್ಲಿ ಶ್ರೀರಾಮನ ಬರುವಿಕೆಗಾಗಿ ಕಾದುಕಾದು ಕಾತರಿಸಿ ಮುಪ್ಪಾಗಿ ಭಕ್ತಿಯೇ ರೂಪುಗೊಂಡಂತೆ ಇದ್ದ ಶಬರಿಯನ್ನು ದರ್ಶಿಸುತ್ತಾರೆ.

ಆಶ್ರಮಕ್ಕೆ ಪಾದಾರ್ಪಣೆ ಮಾಡಿದ ಶ್ರೀರಾಮನು ಶಬರಿಗೆ ತಾಯಿ, ದಾರಿಗರಿಗೆ ಬೀಡಿಲ್ಲಿ ದೊರೆವುದೇ ? ಎಂದು ಕೇಳಿದಾಗ ಶಬರಿಯು, ನೀ ರಾಮನೇ, ಮಹಾಪುರುಷ, ನೀವು ರಾಮಲಕ್ಷ್ಮಣರೆ; ರಾಮನೇ ನೀನು! ಎನ್ನುತ್ತ ಬಹುಸಂತಸ ಸಡಗರದಿಂದ ಅವರನ್ನು ಸ್ವಾಗತಿಸುತ್ತಾ, ರಾಮ ಬಂದು ನಿಂತಿರುವ ಆತನನ್ನು ಕಂಡ ಬೆರಗು ಕಳೆದ ಬಳಿಕ ಅವರ ಸನಿಯಕ್ಕೆ ಹೋಗಿ ಮೈಮುಟ್ಟಿ ಕಾಲುಮುಟ್ಟಿ ನಮಸ್ಕರಿಸಿ, ಸಂತೋಷದ ಭಾಷ್ಪಸುರಿಸಿ ಗದ್ಗದಿತಳಾಗುತ್ತ ಅವರ ಉಪಚಾರಕ್ಕಾಗಿ ಓಡಾಡುತ್ತಾ ಅಯ್ಯೋ ಇಂದು ಏನೂ ಅಣಿಯೆ ಇಲ್ಲ ನಿನ್ನೆಯಷ್ಟು ಚೆನ್ನವಿಲ್ಲ ಎನ್ನುತ್ತ ತನ್ನ ಮನದ ಹಂಬಲದಂತೆ ಬಗೆಬಗೆಯ ಕಂಪನಿಡುವ ವನಮಾಲೆಯನ್ನು ಅವರ ಕೊರಳಿಗೆ ಹಾಕಿ ಇದರಷ್ಟು ರುಚಿಯ ಹಣ್ಣು ಜಗದೊಳಗಿಲ್ಲ. ನಿಮಗೇ ಎಂದೆ ತಂದೆನಿದನೆಂದು ಅವರ ಕೈಯೊಳಗಿಟ್ಟು ಕುಣಿಯುತ್ತಾಳೆ. ಅವಳ

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|

ಪೂಜೆಯಿಂದ ರಾಜಕುಮಾರರು ಪ್ರಸನ್ನರಾಗಿ, ಧನ್ಯಭಾವದಿಂದ ನಿನ್ನ ಉಪಕಾರ ಅಯೋಧ್ಯೆಯ ಅರಮನೆಯ ಉಪಚಾರಕ್ಕಿಂತಲೂ ಮಿಗಿಲಾಗಿತ್ತು ಎಂದು ಹೇಳುತ್ತಾರೆ.

ರಾಮದರ್ಶನಕ್ಕಾಗಿ ಕಾತರಿಸುತ್ತಿರುವ ಶಬರಿಗೆ ಶ್ರೀರಾಮದರ್ಶನ ಧನ್ಯತೆಯನ್ನು ತಂದುಕೊಡುತ್ತದೆ. ಅವರನ್ನು ಆದರ ಆತಿಥ್ಯದಿಂದ ಸತ್ಕರಿಸಿ ಗೌರವಿಸಿದ ಬಳಿಕ ತನ್ನ ಬಾಳಿನ ಹಂಬಲ ತೀರಿದನಂತರ ಬಾಳು ಅರ್ಥಹೀನವೆಂದು ಭಾವಿಸಿ ಮುಕ್ತಿಯನ್ನು ಬಯಸುತ್ತಾಳೆ. ಹೀಗೆ ಶ್ರೀರಾಮದರ್ಶನಕ್ಕಾಗಿ ಕಾದು ಕುಳಿತಿದ್ದ ಶಬರಿಗೆ ರಾಮದರ್ಶನವಾದದ್ದು ನಂಬಿಕೆಟ್ಟವರಿಲ್ಲ ಎಂಬ ಮಾತು ನಿಜವಾಗುತ್ತದೆ.

**ಅಥವಾ**

ಶ್ರೀರಾಮನ ಗುಣ ಸ್ವಭಾವಗಳ ಸೆಳೆತಕ್ಕೆ ಸಿಕ್ಕಿ ಅವನನ್ನು ಕಾಣುವುದೇ ಜೀವನದ ಏಕೈಕ ಗುರಿ ಎಂದು ಭಾವಿಸಿದ್ದ ಅಸಂಖ್ಯಾತ ಭಕ್ತರಲ್ಲಿ ಶಬರಿಯೂ ಒಬ್ಬಳು. ಈಕೆ ಶಬರನ ಮಗಳು. ಮತಂಗ ಋಷಿಯ ಶಿಷ್ಯೆ. ಹೀಗಾಗಿ ಈಕೆಯು ಮತಂಗ ಋಷಿಯ ಆಶ್ರಮದಲ್ಲಿದ್ದಳು. ಮತಂಗ ಮಹರ್ಷಿಗಳು ದಿವ್ಯಲೋಕವನ್ನು ಸೇರಿದ ಬಳಿಕ ಈಕೆ ರಾಮಧ್ಯಾನದಲ್ಲಿ ತೊಡಗಿ ರಾಮನ ದರ್ಶನಕ್ಕಾಗಿ ಕಾದಿರುತ್ತಾಳೆ. ಸೀತಾಪಹರಣದ ಅನಂತರ ಶೋಕತಪ್ತರಾದ ರಾಮಲಕ್ಷ್ಮಣರು ಸೀತೆಯನ್ನು ಹುಡುಕುತ್ತಿರುವಾಗ ತಪಸ್ವಿಯಾದ 'ದನು' ಎಂಬವರು ಶಬರಿಯ ವೃತ್ತಾಂತವನ್ನು ರಾಮನಿಗೆ ತಿಳಿಸುತ್ತಾರೆ, ಅವರ ಸೂಚನೆಯಂತೆ ರಾಮಲಕ್ಷ್ಮಣರು ಮತಂಗಾಶ್ರಮವನ್ನು ಪ್ರವೇಶಿಸುತ್ತಾರೆ.

ಶ್ರೀರಾಮನಿಗಾಗಿ ಹಂಬಲಿಸಿ ಕಾತರಿಸುತ್ತಿರುವ ಶಬರಿಗೆ ಶ್ರೀರಾಮಲಕ್ಷ್ಮಣರು ಆಶ್ರಮಕ್ಕೆ ಬಂದಿರುವುದನ್ನು ಕಂಡು ನೀ ರಾಮನೇ, ರಾಮಲಕ್ಷ್ಮಣರೆ ನೀವು. ರಾಮನೇ ನೀನು! ಎನ್ನುತ್ತ ತನ್ನ ಆರಾಧ್ಯ ಪುರುಷನ ದರ್ಶನದಿಂದಾಗಿ ಶಬರಿ ತುಂಬ ಸಡಗರಗೊಳ್ಳುತ್ತಾಳೆ. ಮೇಳದವರ ಹಾಡಿನಲ್ಲಿ ಅವಳ ಸಂತೋಷ, ಸಡಗರ ಇಮ್ಮಡಿಗೊಂಡಿರುವುದನ್ನು ಕಾಣುತ್ತೇವೆ.

ಕಂಡಳು ಶಬರಿ ರಾಮ ಬಂದು ನಿಂತಿರುವುದನ್ನು ತನ್ನ ಕನಸು ನನಸಾದ ಬಳಿಕ ರಾಮಲಕ್ಷ್ಮಣರ ಸನಿಯಕ್ಕೆ ಹೋಗಿ ಅವರ ಮೈಮುಟ್ಟಿ ಕಾಲುಮುಟ್ಟಿ ಕೈಯ ಕಣ್ಣಿಗೊತ್ತಿಕೊಂಡು ಹನಿಯ ಸುರಿಸಿ, ಬನ್ನಿರೆಂದು ಗದ್ಗದಿತಳಾಗುತ್ತ ಅಯ್ಯೋ ಏನೂ ಅಣಿಯೆ ಇಲ್ಲ ನಿನ್ನೆಯಷ್ಟು ಚೆನ್ನವಿಲ್ಲ! ಎನ್ನುತ ಬಲು ಹಂಬಲದಿಂದ ತನ್ನ ಮನಸ್ಸಿನಂತೆ ಹಲವು ಬಗೆಯ ಕಂಪಸೂಸುವ ವನಮಾಲೆಗಳನ್ನು ಅವರೀರ್ವರ ಕೊರಳಿಗೆ ಹಾಕಿ ಹಿಗ್ಗುತ, ತಾನು ಸಂಗ್ರಹಿಸಿ, ಅವರಿಗೆ ತಿನ್ನಿಸಲು ತಂದ ಕಡುಸವಿಯಾದ ಹಣ್ಣುಗಳನ್ನು ಇದರಷ್ಟು ರುಚಿಯಾದ ಹಣ್ಣೆ ಜಗದೊಳಗಿಲ್ಲ ನಿಮಗೆಂದೆ ಇದನ್ನು ತಂದಿರುವೆನು ಎನ್ನುತ್ತಾ ಅವರ ಕೈಯೊಳಗಿತ್ತು ತಿನ್ನಲು ಹೇಳುತ್ತಾಳೆ. ಅವಳ ಉಪಚಾರ, ಪೂಜೆಯಿಂದ ಸುಪ್ರಸನ್ನರಾದ ಶ್ರೀರಾಮಲಕ್ಷ್ಮಣರು ಮಂದಹಾಸ ತೋರುತ್ತಾರೆ. ಅದನ್ನು ನೋಡಿ ಶಬರಿ ಧನ್ಯಳಾದ ಭಾವನೆ ತಳೆಯುತ್ತಾಳೆ. ಹೀಗೆ ಉಪಚಾರವನ್ನು ಮಾಡಿ ಶಬರಿ ತನ್ನ ಅಂತಸ್ಸುಖವನ್ನು ತೋರುವುದಕ್ಕೆ ಹಾಡಿಕೊಂಡು ನರ್ತಿಸುತ್ತಾಳೆ. ಸುಖಿ ನಾ ಸುಖಿ ನಾ ಬರಿ ಸುಖಿ ಸುಮ್ಮನೆ

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಸುಖಿ ನಾನು ನಾನಿಲ್ಲದ ನಾನಾಗಿಹೆನು. ಆಸೆ ತೀರಿ ಹಾಯಾಗಿಹೆನು. ಹಂಬಲನಳಿದಿಹೆ ತುಂಬಿರುವೆನು ನಾ. ಹೊಳೆ ಕಡಲಿಗೆ ಸೇರುವ ತೆರದಿ, ನಿನ್ನೆ ನಾಳೆ ಇನ್ನಿಲ್ಲವೆನಗೆ, ಈ ನಲವೇ ಚಿರವೆಂಬ ತೆರ ಸುಖಿ ನಾ ಸುಖಿ ಎನ್ನುತ್ತ ಆನಂದ ಪಡುತ್ತಾಳೆ. ನಿನ್ನಾದರದೊಳು ನಾವು ಸುಖಿ ಎನ್ನುವ ಶ್ರೀರಾಮನ ನುಡಿ ಕೇಳಿ, ಅವನನ್ನು ನೋಡುತ್ತಾ ಕೊನೆ ಕೊನೆಗೆ ಕಂಬನಿದುಂಬಿ ಬಲುಸಂತಸ, ಬಲುಸಂತಸವೆನಗೆ, ನನ್ನ ಆಸೆಯ ಜಾಡುಹಿಡಿದು ನನಗೆ ದರ್ಶನ ನೀಡಲು ಬಂದಿರಲ್ಲ. ತಣಿದಿರಾ, ಹಸಿವು ತೃಷೆಯನುಳಿದಿರಾ ನಾನು ಬಡವೆ. ಒಬ್ಬಳೇನಗೈವೆ ಎನ್ನುವ ಮಾತುಗಳಿಗೆ ಅಯ್ಯೋಧ್ಯೆಯ ಅರಮನೆಗಿಂತಲೂ ಹೆಚ್ಚಿನ ಉಪಚಾರ ಅನುಭವಿಸಿದೆವು. ನಿನ್ನನ್ನು ತಾಯಿಯೆಂದೆ ತಿಳಿದೆವು ಎಂದಾಗ ರಾಮನ ರೂಪ ಮಾತುಗಳನ್ನು ಹೊಗಳಿಸಿ ಸಂತಸಪಡುತ್ತಾಳೆ. ನನಗಿಂದು ಸಿದ್ಧರ ವರವಿಂದು ಫಲಿಸಿತು. ನಾನು ಕೃತಾರ್ಥಳಾದೆ. ರಾಮಲಕ್ಷ್ಮಣರನ್ನು ಆತಿಥ್ಯದಿಂದ ಸತ್ಕರಿಸಿ. ಗೌರವಿಸಿದ ಬಳಿಕ ಧನ್ಯತೆಯ ಭಾವನೆಯಿಂದ ಮುಕ್ತಿಯನ್ನು ಬಯಸುತ್ತಾಳೆ. ಹೀಗೆ ಶಬರಿಯ ಸಡಗರ, ಸಂತೋಷ ಮೇಳದವರ ಹಾಡಿನಲ್ಲಿ ವರ್ಣಿತವಾಗಿದೆ. | |
| 44. | ಭೀಷ್ಮ ಮತ್ತು ದುರ್ಯೋಧನರ ನಡುವಿನ ಸಂಭಾಷಣೆಯ ಸ್ವಾರಸ್ಯವನ್ನು ವಿವರಿಸಿ.<br>***ಅಥವಾ***<br>ದುರ್ಯೋಧನನ ಛಲದ ಗುಣ ಅವನ ಮಾತುಗಳಲ್ಲಿ ವ್ಯಕ್ತವಾಗಿರುವ ಬಗೆಯನ್ನು ವಿವರಿಸಿ.<br>***ಉತ್ತರ :***<br>ಕುರುಕ್ಷೇತ್ರ ಯುದ್ಧದಲ್ಲಿ ಈಗಾಗಲೇ ಪ್ರಾಣಸ್ನೇಹಿತ ಕರ್ಣ ಹಾಗೂ ಸಹೋದರನಾದ ದುಶ್ಯಾಸನನ್ನು ಕಳೆದುಕೊಂಡ ಛಲದಂಕಮಲ್ಲ ದುರ್ಯೋಧನನು ತನ್ನ ತಂದೆ ಧೃತರಾಷ್ಟ್ರ ತಾಯಿ ಗಾಂಧಾರಿಯ ಅಪೇಕ್ಷೆಯಂತೆ ರಣರಂಗದಲ್ಲಿ ಶರಶಯ್ಯೆಯಲ್ಲಿ ಮಲಗಿದ್ದ ತಾತ ಭೀಷ್ಮರ ಸಲಹೆಯನ್ನು ಪಡೆಯಲು ಬರುತ್ತಾನೆ. ಭೀಷ್ಮರು ಯುದ್ಧವನ್ನು ಮುಂದುವರಿಸದೆ ಪಾಂಡವರೊಂದಿಗೆ ಸಂಧಿ ಮಾಡಿಕೊಂಡು ಬದುಕು ಎಂಬ ಸಲಹೆಯನ್ನು ನೀಡಲು ಮುಂದಾಗುತ್ತಾರೆ. ಆಗ ಭೀಷ್ಮಾಚಾರ್ಯರು ದುರ್ಯೋಧನನ್ನು ಉದ್ದೇಶಿಸಿ ಈ ರೀತಿ ಮಾತುಗಳನ್ನಾಡುತ್ತಾರೆ. ದುರ್ಯೋಧನಾ ನೀನು ಸಂಧಿ ಮಾಡಿಕೊಳ್ಳಲು ಸಮ್ಮತಿಸಿದರೆ ನಾನು ಪಾಂಡವರನ್ನು ಒಪ್ಪಿಸುತ್ತೇನೆ. ಅವರು ನಾನು ಹೇಳಿದರೆ ಮೊದಲಿನಂತೆಯೇ ನಡೆದುಕೊಳ್ಳುತ್ತಾರೆ. ಅವರು ನನ್ನ ಮಾತುಗಳನ್ನು ಮೀರುವುದಿಲ್ಲ. ಆದರೆ ನೀನು ನಾನು ಹೇಳಿದ್ದನ್ನು ಕೇಳು, ನಾನು ಹೇಳಿದಂತೆ ನಡೆದುಕೊಳ್ಳು. ಇದರಿಂದ ಎಲ್ಲರಿಗೂ ಒಳ್ಳೆಯದಾಗುತ್ತದೆ, ನಿನ್ನ ತಂದೆ–ತಾಯಿಗಳ ಆಸೆಯೂ ಅದೇ ಆಗಿರುತ್ತದೆ ಎಂಬ ಭೀಷ್ಮರ ಮಾತುಗಳಿಗೆ ದುರ್ಯೋಧನನು ಪ್ರತಿಯಾಗಿ ಮೊದಲು ಭೀಷ್ಮರ ಪಾದಗಳಿಗೆ ನಮಸ್ಕರಿಸಿ, ಶತ್ರುಗಳಾದ ಪಾಂಡವರೊಂದಿಗೆ ಸಂಧಿ ಮಾಡಿಕೊಂಡು ಬದುಕುವ ಮಾತುಗಳನ್ನು ಹೇಳುತ್ತಿರುವ ನೀವು ನನ್ನ ಸದ್ಯದ ಪರಿಸ್ಥಿತಿಯನ್ನು ಮನಃಸ್ಥಿತಿಯನ್ನು ನೋಡಿ ಯುದ್ಧಭೂಮಿಯಲ್ಲಿ ನಾನು ಮಾಡಬೇಕಾಗಿರುವ ಮೊದಲ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಕೆಲಸ ಯಾವುದೆಂಬುದನ್ನು ಹೇಳಿ, ನಾನು ಯುದ್ಧ ಮಾಡುತ್ತಿರುವುದು ನೆಲಕ್ಕಾಗಿ ಎಂದು ತಿಳಿದಿದ್ದರೆ, ಅದು ತಪ್ಪು. ಕರ್ಣ ದುಶ್ಶಾಸನರಿಲ್ಲದ ಈ ನೆಲ ನನಗೆ ಪಾಳುಬಿದ್ದಿರುವ ನೆಲ. ಅವರನ್ನು ಸಂಹರಿಸಿದವರನ್ನು ಸಂಹರಿಸುವುದೇ ನನ್ನ ಹಠ. ನನ್ನ ಜೀವದ ಗೆಳೆಯ ಕರ್ಣ, ಪ್ರಿಯ ತಮ್ಮ ದುಶ್ಶಾಸನರನ್ನು ಕೊಂದಿರುವ ಆ ಭೀಮ ಅರ್ಜುನರನ್ನು ಕೊಲ್ಲುವವರೆಗೂ ನನಗೆ ಸಮಾಧಾನವಿಲ್ಲ. ಮೊದಲು ಆ ಕಾರ್ಯವನ್ನು ಪೂರೈಸಿ ತದನಂತರ ಯುಧಿಷ್ಠಿರನೊಂದಿಗೆ. ನನ್ನ ದುಃಖ ಆರುವವರೆಗೂ ಸಾಧ್ಯವಿಲ್ಲ ನನ್ನ ದೇಹದಲ್ಲಿ ನನ್ನ ಪ್ರಾಣವಿರುವವರೆಗೂ ಸಂಧಿಯ ಮಾತು ಸಾಧ್ಯವಿಲ್ಲ ಎಂಬ ಛಲದ ಮಾತುಗಳು ಆತನ ಬಾಯಿಂದ ಹೊರಬರುತ್ತವೆ.<br><br>ನನ್ನ ಒಡಹುಟ್ಟಿದ ನೂರ್ವರು ಮತ್ತು ನನಗೆ ಹುಟ್ಟಿದ ನೂರ್ವರು ನನಗಾಗಿ ಹೋರಾಡಿದರು, ಅವರನ್ನು ಕಳೆದುಕೊಂಡಿರುವ ನನಗೆ ಕೋಪ ಉಕ್ಕಿಬರುತ್ತಿದೆ. ಸತ್ತವರು ಮರಳಿ ಹುಟ್ಟಿ ಬರುವರೆ ? ಅವರೆಲ್ಲರನ್ನು ಕಳೆದುಕೊಂಡಿರುವ ನಾನು ಒಪ್ಪಂದ ಮಾಡಿಕೊಂಡು ಏನು ಮಾಡಲಿ, ಯಾವ ಸುಖಕ್ಕಾಗಿ ರಾಜ್ಯವಾಳಲಿ, ಆ ಪಾಂಡವರನ್ನು ಸಂಹರಿಸಿಯೇ ತೀರುತ್ತೇನೆ. ಇಂದಿನ ಯುದ್ಧದಲ್ಲಿ ಏನಾಗುತ್ತದೊ ಆಗಲಿ ಎನ್ನುವ ಛಲದಿಂದ ಭೀಷ್ಮರ ಸಲಹೆಯನ್ನು ಸ್ವೀಕರಿಸದೆ ದುರ್ಯೋಧನನು ತನ್ನ ಛಲಕ್ಕಾಗಿಯೇ ಹಠಹಿಡಿಯುತ್ತಾನೆ. ಹಿರಿಯರಾದ ಭೀಷ್ಮರ ಎದುರಿನಲ್ಲಿಯೇ ಸಂಧಿಗೆ ಒಪ್ಪದೆ ಯುದ್ಧ ಮಾಡಿಯೇ ತೀರಬೇಕೆಂಬ ಅವನ 'ಛಲ' ಅವನ ಸ್ವಭಾವಕ್ಕೆ ತಕ್ಕನಾಗಿಯೇ ಅವನ ಮಾತುಗಳಲ್ಲಿ ವ್ಯಕ್ತವಾಗಿರುವುದು ರನ್ನನ ಕಾವ್ಯದ ಉದ್ದಕ್ಕೂ ಕಂಡುಬರುತ್ತದೆ.<br><br>ಯುದ್ಧದ ಪರಿಣಾಮ ಯಾವಾಗಲೂ ಸರ್ವನಾಶವೇ ಯುದ್ಧಕ್ಕೆ ಕಾರಣ ಯಾರೇ ಆಗಿದ್ದರೂ ಅದರ ಪರಿಣಾಮವನ್ನು ಎಲ್ಲರೂ ಅನುಭವಿಸಬೇಕಾಗುತ್ತದೆ. ಅದನ್ನೇ ನಾವು ದುರ್ಯೋಧನನ ಬದುಕಿನಲ್ಲಿ ಕಾಣುತ್ತೇವೆ.<br><br>***ಅಥವಾ***<br><br>ಕೌರವ ಪಾಂಡವರ ನಡುವೆ 'ಕೃಷ್ಣ ಸಂಧಾನ' ವಿಫಲವಾಗಿ 'ಕುರುಕ್ಷೇತ್ರ' ಯುದ್ಧ ಅನಿವಾರ್ಯವಾಗುತ್ತದೆ. ಕೌರವ ಪಾಂಡವರ ನಡುವೆ 18 ದಿವಸಗಳ ಘೋರ ಸಂಗ್ರಾಮ ಪ್ರಾರಂಭಗೊಳ್ಳುತ್ತದೆ, ನ್ಯಾಯ ಪಾಂಡವರ ಕಡೆಯಿದ್ದರೂ, ದುರ್ಯೋಧನನ ಹಠದಿಂದಾಗಿ ಯುದ್ಧ ಜರುಗಿ ಯುದ್ಧದಲ್ಲಿ ಕೌರವರ ಕಡೆಯ ಬಹುಪಾಲು ಎಲ್ಲರೂ ಅಂದರೆ ತೊಂಬತ್ತೊಂಬತ್ತು ಮಕ್ಕಳನ್ನು ಕಳೆದುಕೊಂಡ ಧೃತರಾಷ್ಟ್ರ ಗಾಂಧಾರಿಯರು ಕಂಗಾಲಾಗಿ ರಣಾಂಗಣಕ್ಕ ಬಂದು ಉಳಿದಿರುವ ಒಬ್ಬ ಮಗನಾದರೂ ಬದುಕಲಿ ಎಂಬ ಭಾವನೆಯಿಂದ ಆತನಿಗೆ ಯುದ್ಧ ನಿಲ್ಲಿಸಿ ಸಂಧಿ ಮಾಡಿಕೊಳ್ಳುವ ಸಲಹೆ ನೀಡುತ್ತಾರೆ. ಅಲ್ಲದೆ ಭೀಷ್ಮರ ಸಲಹೆಯಂತೆ ಮುಂದುವರೆಯಲು ಸೂಚಿಸುತ್ತಾರೆ. ದುರ್ಯೋಧನನು ತಂದೆ–ತಾಯಿಯರ ಅಪೇಕ್ಷೆಯಂತೆ ರಣರಂಗದಲ್ಲಿ ಶರಶಯ್ಯೆಯಲ್ಲಿ ಮಲಗಿದ್ದ ತಾತ ಭೀಷ್ಮರ ಸಲಹೆಯನ್ನು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಪಡೆಯಲು ಬರುತ್ತಾನೆ. ಭೀಷ್ಮರು ದುರ್ಯೋಧನನಿಗೆ ಯುದ್ಧವನ್ನು ಮಾಡದೆ ಪಾಂಡವರೊಂದಿಗೆ ಸಂಧಿ ಮಾಡಿಕೊ, ನಾನು ಪಾಂಡವರನ್ನು ಸಂಧಿಗಾಗಿ ಒಪ್ಪಿಸುವೆ, ಅವರು ನನ್ನ ಮಾತುಗಳನ್ನು ಮೀರದೆ ಪಾಲಿಸುತ್ತಾರೆ, ನಿನ್ನೊಂದಿಗೆ ಮೊದಲಿನಂತೆಯೇ ನಡೆದುಕೊಳ್ಳುತ್ತಾರೆ, ಅದಕ್ಕಾಗಿ ನೀನು ನಾನು ಹೇಳುವ ಮಾತುಗಳನ್ನು ಕೇಳಿ ಸಂಧಿ ಮಾಡಿಕೊಂಡು ಸುಖದಿಂದ ಬಾಳು ಎನ್ನುವ ಭೀಷ್ಮರ ಸಲಹೆ ಹಠವಾದಿಯೂ ಛಲದಂಕಮಲ್ಲನೂ, ಸ್ವಾಭಿಮಾನಿಯೂ ಆದ ದುರ್ಯೋಧನನಿಗೆ ಹಿಡಿಸುವುದಿಲ್ಲ. ಆತ ಭೀಷ್ಮಾಚಾರ್ಯರ ಮಾತುಗಳಿಗೆ ಪ್ರತಿಯಾಗಿ ಅಜ್ಜ ನಾನೀಗ ಯುದ್ಧಭೂಮಿಯಲ್ಲಿ ಶತ್ರುಗಳನ್ನು ಸಂಹರಿಸುವ ಪಣದೊಂದಿಗೆ ಹೋರಾಡುತ್ತಿರುವ ನನಗೆ ಸಂಧಿಯ ಮಾತುಗಳನ್ನು ಹೇಳುತ್ತಿರುವಿರಲ್ಲ. ಹುಟ್ಟಿದ ನೂರ್ವರು, ಒಡಹುಟ್ಟಿದ ನೂರ್ವರನ್ನೂ ಅಲ್ಲದೆ ಜೀವದ ಗೆಳೆಯ ಕರ್ಣನನ್ನು ಪ್ರೀತಿಯ ತಮ್ಮ ದುಶ್ಶಾಸನನ್ನು ಕಳೆದುಕೊಂಡಿರುವ ನನಗೆ ನಾನು ಈ ನೆಲಕ್ಕಾಗಿ ಯುದ್ಧ ಮಾಡುತ್ತಿದ್ದೇನೆಂದು ತಿಳಿದಿರುವಿರಾ ಅಲ್ಲ. ನನ್ನ ಕರ್ಣ, ದುಶ್ಶಾಸನರನ್ನು ಕೊಂದ ಆ ಭೀಮಾರ್ಜುನರನ್ನು ಸಂಹರಿಸುವವರೆಗೂ ನನಗೆ ಶಾಂತಿಯಿಲ್ಲ. ಎಲ್ಲರನ್ನೂ ಕಳೆದುಕೊಂಡ ನನಗೆ ಈ ನೆಲ ಪಾಳ್ನೆಲ. ನನ್ನ ಶರೀರದಲ್ಲಿ ನನ್ನ ಪ್ರಾಣವಿರುವವರೆಗೂ ನಾನು ಪಾಂಡವರನ್ನು ಸಂಹರಿಸುವುದಕ್ಕಾಗಿಯೇ ಹೋರಾಡುತ್ತೇನೆ. ಈ ನೆಲಕ್ಕಾಗಿ ಅಲ್ಲ ಎನ್ನುವ ಮಾತುಗಳಲ್ಲಿ ದುರ್ಯೋಧನನ ಛಲ, ಹಠವೇ ವ್ಯಕ್ತವಾಗುತ್ತದೆ. ಭೀಷ್ಮರ ಎದುರಿನಲ್ಲಿಯೇ ಸಂಧಿಗೆ ಒಪ್ಪದ, ಯುದ್ಧ ಮಾಡಿಯೇ ತೀರಬೇಕೆಂಬ ಅವನ ಛಲ, ಅವನ ಸ್ವಭಾವಕ್ಕೆ ತಕ್ಕನಾಗಿ ಮೂಡಿಬಂದಿರುವುದನ್ನು ರನ್ನ ಕವಿಯ ಕಾವ್ಯದುದ್ದಕ್ಕೂ ಕಾಣುತ್ತೇವೆ.<br><br>ಜೀವನದಲ್ಲಿ ಪರಸ್ಪರ ಹೊಂದಾಣಿಕೆ ಮತ್ತು ಸಾಮರಸ್ಯದ ಬದುಕು ಅಪೇಕ್ಷಣೀಯ. ಅದು ಸಾಧ್ಯವಾಗದೆ ಮತ್ಸರ, ಛಲ ಪ್ರಧಾನವಾದರೆ ಸಂಘರ್ಷ ಅನಿವಾರ್ಯವಾಗುತ್ತದೆ. ಯುದ್ಧದ ಪರಿಣಾಮ ಯಾವಾಗಲೂ ಸರ್ವನಾಶವೇ. ಯುದ್ಧಕ್ಕೆ ಕಾರಣ ಯಾರೇ ಆಗಿದ್ದರೂ ಅದರ ಪರಿಣಾಮವನ್ನು ಎಲ್ಲರೂ ಅನುಭವಿಸಬೇಕಾಗುತ್ತದೆ. ಉತ್ತಮ ಗುಣ, ಸ್ವಭಾವಗಳನ್ನು ರೂಢಿಸಿಕೊಳ್ಳದ ವ್ಯಕ್ತಿ ಎಷ್ಟೇ ಶೌರ್ಯ, ಸಾಹಸ, ವೀರತನವನ್ನು ಪಡೆದಿದ್ದರೂ ಸ್ವತಃ ಅವನಿಗಾಗಲಿ, ಅವನ ಹಿರಿಯರಿಗಾಗಲಿ ಯಾವುದೇ ಉಪಯೋಗವಾಗುವುದಿಲ್ಲ. ದಾಯಾದಿಗಳೊಳಗಿನ ದ್ವೇಷಾಸೂಯೆಗಳು ನಮ್ಮ ಮನವನ್ನೂ ಮನೆಯನ್ನೂ ನಾಶಪಡಿಸುತ್ತವೆ ಎಂಬುದಕ್ಕೆ ಮಹಾಭಾರತದಲ್ಲಿನ ದುರ್ಯೋಧನನ ಪಾತ್ರ ನಿದರ್ಶನವಾಗುತ್ತದೆ. ಹೀಗೆ ದುರ್ಯೋಧನ ಎಂದರೆ ಛಲಗಾರ, ಹಠವಂತ ಎಂದು ಹೇಳಿದರೆ ತಪ್ಪಾಗುವುದಿಲ್ಲ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 45. | **ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸುವುದು : (ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು)** | 2 × 2 = 4 |
| | ಬೆಳಗಾವಿಯ ಒಂದು ಬಡಾವಣೆ. ಅಲ್ಲಿನ ನಿವಾಸಿಗಳು ಪ್ರತಿನಿತ್ಯ ಮನೆಯ ಕಸಗುಡಿಸಿ ತಂದು ರಸ್ತೆಗೆ ಸುರಿಯುತ್ತಿದ್ದರು. ಅವರಲ್ಲೊಬ್ಬರನ್ನು "ಕಸತಂದು ರಸ್ತೆಗೆ ಯಾಕೆ ಹಾಕ್ತೀರ ? ತೊಟ್ಟಿಗೆ ಯಾಕೆ ಹಾಕಲ್ಲ ?" ಎಂದು ಕೇಳಿದಾಗ ಹೀಗೆ ಗುಡುಗಿದರು; "ಮೊದಲ್ನೇದಾಗಿ, ತೊಟ್ಟಿ ಈ ರಸ್ತೆಯ ತುದೀಲಿದೆ. ಎರಡನೆಯದಾಗಿ, ನಾವ್ಯಾಕೆ ಅಲ್ಲಿಯವರೆಗೂ ತೆಗೆದುಕೊಂಡು ಹೋಗಿ ಹಾಕ್ಬೇಕು ? ನಾವು ಹೊರಗೆ ಸುರೀತೀವಿ. ಸಂಬಳ ತಗೋತಾರಲ್ಲ ಮಹಾನಗರ ಪಾಲಿಕೆ ಆಳುಗಳು, ಅವರು ತೊಗೊಂಡು ಹೋಗಿ ಹಾಕ್ಲಿ ತೊಟ್ಟೀಲಿ." "ಆದ್ರೆ ನಿಮ್ಮ ರಸ್ತೇನೇ ಕೊಳೆ ಆಗುತ್ತಲ್ಲ ಮನೆ ಮುಂದೆ ಕಸ ಹಾಕಿದ್ರೆ" ಅಂದಾಗ "ರಸ್ತೆ ನಮ್ದು ಅಂತ ಯಾರು ಹೇಳಿದ್ರು ನಿಮಗೆ ? ಈ ಮನೆ ನಮ್ದು, ರಸ್ತೆ ಸರ್ಕಾರದ್ದು. ಅದನ್ನು ಸರಿಯಾಗಿ ಇಟ್ಟುಕೊಳ್ಳೋದು ಅವರ ಕೆಲಸ" ಅಂದರು. ಈ ಉದಾಹರಣೆ ನಮ್ಮ ಪರಿಸರದ ಬಗ್ಗೆ ಜನಸಾಮಾನ್ಯರಲ್ಲಿರುವ ಅಕ್ಷಮ್ಯವಾದ ಬೇಜವಾಬ್ದಾರಿತನವನ್ನು ಎತ್ತಿ ತೋರಿಸುತ್ತದೆ. ಪರಿಸರ ಸಂರಕ್ಷಣೆಯ ಸಮಸ್ತ ಜವಾಬ್ದಾರಿಯೂ ಸರ್ಕಾರದ್ದೇ ಎಂಬ ನಿರ್ಲಿಪ್ತ ಮನೋಭಾವವೇ ನಮ್ಮೆಲ್ಲ ಸಮಸ್ಯೆಗಳಿಗೂ ಕಾರಣ. | |
| | ಪರಿಸರ ಪ್ರಜ್ಞೆಯ ತೀವ್ರ ಅಭಾವ ಬಹುಸಾಮಾನ್ಯವಾದರೂ ಪರಿಸರವನ್ನು ಸಂರಕ್ಷಿಸಲು ಹೋರಾಟಕ್ಕೆ ನಿಲ್ಲುವ ಅಪೂರ್ವ ಪ್ರಯತ್ನಗಳನ್ನು ನಾವು ಆಗಾಗ ಅಪರೂಪವಾಗಿ ನೋಡಬಹುದು. 'ಚಿಪ್ಕೋ ಚಳವಳಿ' ಇದಕ್ಕೊಂದು ಉತ್ತಮ ಉದಾಹರಣೆ. ಚಿಪ್ಕೋ – ಈ ಹೆಸರು ನಿಮಗೆ ವಿಚಿತ್ರವಾಗಿ ಕೇಳಬಹುದು. ಇದೊಂದು ಹಿಂದಿ ಭಾಷೆಯ ಪದ. ಅರ್ಥ : ಅಪ್ಪಿಕೋ, ತಬ್ಬಿಕೋ! ಈ ಚಳವಳಿ ಪ್ರಾರಂಭವಾದದ್ದು 1973 ರಲ್ಲಿ. ಉತ್ತರ ಪ್ರದೇಶದ ಚಮೋಲಿ ಜಿಲ್ಲೆಯ ಮಂಡಲ್ ಎಂಬ ಹಳ್ಳಿಯಲ್ಲಿ. ಈ ಚಳವಳಿಗೆ ಕಾರಣರಾದವರು ಮಂಡಲ್ ಹಳ್ಳಿಯ ಅನಕ್ಷರಸ್ಥ ಮಹಿಳೆಯರು. | |
| | *ಪ್ರಶ್ನೆಗಳು :* | |
| | ಅ) ಚಿಪ್ಕೋ ಚಳವಳಿಯನ್ನು ಕುರಿತು ಬರೆಯಿರಿ. | |
| | ಆ) ಪರಿಸರ ಸ್ವಚ್ಛತೆಯ ಕುರಿತು ಜನಸಾಮಾನ್ಯರಲ್ಲಿರುವ ಸಾಮಾನ್ಯ ಮನೋಭಾವನೆಗಳೇನು ? | |
| | ***ಉತ್ತರ :*** | |
| | ಅ) ಪರಿಸರವನ್ನು ಸಂರಕ್ಷಿಸಲು ಹೋರಾಟಕ್ಕೆ ನಿಲ್ಲುವ ಅಪೂರ್ವ ಪ್ರಯತ್ನಗಳಲ್ಲಿ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | 'ಚಿಪ್ಕೋ ಚಳುವಳಿ' ಉತ್ತಮ ಉದಾಹರಣೆಯಾಗಿದೆ. 'ಚಿಪ್ಕೋ' ಇದು ಹಿಂದಿ ಭಾಷೆಯ ಪದವಾಗಿದ್ದು, ಅದರ ಅರ್ಥ ಅಪ್ಪಿಕೋ, ತಬ್ಬಿಕೋ! ಎಂದಾಗುತ್ತದೆ. ಈ ಚಳವಳಿ 1973 ರಲ್ಲಿ ಉತ್ತರಪ್ರದೇಶದ ಚಮೋಲಿ ಜಿಲ್ಲೆಯ ಮಂಡಲ್ ಎಂಬ ಹಳ್ಳಿಯಲ್ಲಿ ಪ್ರಾರಂಭವಾಗಿದೆ. ಈ ಚಳವಳಿಗೆ ಕಾರಣರಾದವರು ಮಂಡಲ್ ಹಳ್ಳಿಯ ಅನಕ್ಷರಸ್ಥ ಹೆಣ್ಣುಮಕ್ಕಳು. | |
| | ಆ) ಮನೆಯ ಕಸಗುಡಿಸಿ ರಸ್ತೆಗೆ ತಂದು ಯಾಕೆ ಹಾಕ್ತೀರ ? ತೊಟ್ಟಿಗೆ ಯಾಕೆ ಹಾಕುವುದಿಲ್ಲವೆಂದು ಕೇಳಿದಾಗ, ತೊಟ್ಟಿ ರಸ್ತೆಯ ತುದೀಲಿದೆ, ನಾವ್ಯಾಕೆ ಅಲ್ಲಿಯವರೆಗೂ ತೆಗೆದುಕೊಂಡು ಹೋಗಿ ಹಾಕ್ಬೇಕು ? ಸಂಬಳ ತೆಗೆದುಕೊಳ್ಳುವ ಮಹಾನಗರ ಪಾಲಿಕೆ ಆಳುಗಳು, ಅವರು ನಾವು ರಸ್ತೆಗೆ ಸುರುಹಿದ್ದ ಕಸ ತೊಗೊಂಡು ಹಾಕ್ಲಿ ತೊಟ್ಟೀಲಿ, ಎನ್ನುವವರನ್ನು "ಮನೆ ಮುಂದೆ ಕಸ ಹಾಕಿದ್ರೆ ನಿಮ್ಮ ರಸೆನೇ ಕೊಳೆ ಆಗುತ್ತಲ್ಲ ಅಂದಾಗ ರಸ್ತೆ ನಮ್ದು ಅಂತ ಯಾರು ಹೇಳಿದ್ರು ನಿಮಗೆ ? ಈ ಮನೆ ನಮ್ದು, ರಸ್ತೆ ಸರ್ಕಾರದ್ದು. ಅದನ್ನು ಸರಿಯಾಗಿ ಇಟ್ಟುಕೊಳ್ಳುವುದು ಅವರ ಕೆಲಸ" ಎನ್ನುವವರ ಮನದಲ್ಲಿ ನಮ್ಮ ಸುತ್ತಮುತ್ತಲಿನ ನಮ್ಮ ಪರಿಸರವೇ ಕೆಡುತ್ತದೆ ಎಂಬುದರ ಸಾಮಾನ್ಯ ತಿಳುವಳಿಕೆ ಮೂಡಿ ಬರಬೇಕಾಗಿದೆ.<br><br>ಪರಿಸರ ಸಂರಕ್ಷಣೆಯ ಸಮಸ್ತ ಜವಾಬ್ದಾರಿಯೂ ನಮ್ಮದೇ ಸರ್ಕಾರವೆಂದರೆ ನಾವೇ ಎನ್ನುವ ಜ್ಞಾನ ಜನಸಾಮಾನ್ಯರಲ್ಲಿ ಜಾಗೃತಿಗೊಳಿಸಬೇಕಾಗಿದೆ. | |
| | **ವಿಭಾಗ – 'ಬಿ'**<br>**(ಅನ್ವಯಿಕ ವ್ಯಾಕರಣ, ಅಲಂಕಾರ, ಛಂದಸ್ಸು)**<br>**ಬಹು–ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :** | $10 \times 1 = 10$ |
| 46. | 'ಸಂಗ್ರಹಾಲಯ' ಪದವು ಈ ಸಂಧಿಗೆ ಉದಾಹರಣೆಯಾಗಿದೆ<br>(ಎ) ಗುಣ ಸಂಧಿ (ಬಿ) ಸವರ್ಣದೀರ್ಘ ಸಂಧಿ<br>(ಸಿ) ವೃದ್ಧಿ ಸಂಧಿ (ಡಿ) ಅನುನಾಸಿಕ ಸಂಧಿ<br>***ಉತ್ತರ :*** (ಬಿ) ಸವರ್ಣದೀರ್ಘ ಸಂಧಿ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 47. | ಸಂಬೋಧನೆಯ ಮುಂದೆ ಹಾಗೂ ಕರ್ತೃ, ಕರ್ಮ, ಕ್ರಿಯಾಪದಗಳಿಗೆ ಬೇರೆ ಬೇರೆ ವಿಶೇಷಣಗಳು ಬರುವಾಗ ಕೊನೆಯ ವಿಶೇಷಣ ಬಿಟ್ಟು ಉಳಿದವುಗಳ ಮುಂದೆ ಬಳಸುವ ಲೇಖನ ಚಿಹ್ನೆ<br>(ಎ) ಅಲ್ಪವಿರಾಮ (ಬಿ) ಅರ್ಧವಿರಾಮ<br>(ಸಿ) ಪೂರ್ಣವಿರಾಮ (ಡಿ) ಉದ್ಧರಣ<br>***ಉತ್ತರ :*** (ಎ) ಅಲ್ಪವಿರಾಮ | |
| 48. | 'ಕರ್ಮಧಾರಯ' ಸಮಾಸಕ್ಕೆ ಉದಾಹರಣೆಯಿದು<br>(ಎ) ನೆಯ್ದುವಸ್ತ್ರ (ಬಿ) ಮಹೀಪತಿ<br>(ಸಿ) ಕಣ್ದೆರೆ (ಡಿ) ಹೆದ್ದೊರೆ<br>***ಉತ್ತರ :*** (ಡಿ) ಹೆದ್ದೊರೆ | |
| 49. | ಕನ್ನಡ ವರ್ಣಮಾಲೆಯಲ್ಲಿರುವ ಮಹಾಪ್ರಾಣಾಕ್ಷರಗಳ ಸಂಖ್ಯೆ<br>(ಎ) ಐದು (ಬಿ) ಒಂಬತ್ತು<br>(ಸಿ) ಹತ್ತು (ಡಿ) ಹದಿಮೂರು<br>***ಉತ್ತರ :*** (ಸಿ) ಹತ್ತು | |
| 50. | ಕ್ರಿಯೆ ನಡೆದ ರೀತಿಯನ್ನು ಹೇಳುವಂತಹ ಅವ್ಯಯಗಳನ್ನು ಹೀಗೆನ್ನುತ್ತೇವೆ<br>(ಎ) ಕ್ರಿಯಾರ್ಥಕ (ಬಿ) ಅನುಕರಣ<br>(ಸಿ) ಸಾಮಾನ್ಯ (ಡಿ) ಸಂಬಂಧಾರ್ಥಕ<br>***ಉತ್ತರ :*** (ಸಿ) ಸಾಮಾನ್ಯ | |
| 51. | ಕೃದಂತಭಾವನಾಮಕ್ಕೆ ಉದಾಹರಣೆಯಾಗುವ ಪದವಿದು<br>(ಎ) ನೋಟ (ಬಿ) ನೋಡಲು<br>(ಸಿ) ನೋಡುವ (ಡಿ) ನೋಡದ<br>***ಉತ್ತರ :*** (ಎ) ನೋಟ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 52. | ಕಾರವಾರದಲ್ಲಿ ಮಲೇರಿಯಾ ಹಬ್ಬಿ, ವೀರೇಶ್ವರ ಪಾಠಕ್‌ರವರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಿ, ಅವರು ಅಲ್ಲಿಂದ ವರ್ಗಾವಣೆ ಹೊಂದುವಂತೆ ಆಯಿತು. – ಈ ವಾಕ್ಯವು<br>(ಎ) ಮಿಶ್ರವಾಕ್ಯ (ಬಿ) ಸಾಮಾನ್ಯ ವಾಕ್ಯ<br>(ಸಿ) ಸಂಯೋಜಿತ ವಾಕ್ಯ (ಡಿ) ಪ್ರಶ್ನಾರ್ಥಕ ವಾಕ್ಯ<br>***ಉತ್ತರ :*** (ಬಿ) ಸಾಮಾನ್ಯ ವಾಕ್ಯ | |
| 53. | 'ಮಾಡೇವು' ಪದವು ಈ ವ್ಯಾಕರಣಾಂಶಕ್ಕೆ ಸೇರಿದೆ<br>(ಎ) ವಿಧ್ಯರ್ಥಕ (ಬಿ) ಸಂಬಂಧಾರ್ಥಕ<br>(ಸಿ) ನಿಷೇಧಾರ್ಥಕ (ಡಿ) ಸಂಭಾವನಾರ್ಥಕ<br>***ಉತ್ತರ :*** (ಡಿ) ಸಂಭಾವನಾರ್ಥಕ | |
| 54. | 'ಸಾವಿತ್ರಿಯೊಳ್' ಪದದಲ್ಲಿರುವ ವಿಭಕ್ತಿಯಿದು<br>(ಎ) ಪ್ರಥಮಾ (ಬಿ) ತೃತೀಯಾ<br>(ಸಿ) ಪಂಚಮೀ (ಡಿ) ಸಪ್ತಮೀ<br>***ಉತ್ತರ :*** (ಡಿ) ಸಪ್ತಮೀ | |
| 55. | ಆತ್ಮಾರ್ಥಕ ಸರ್ವನಾಮ ಪದವಿದು<br>(ಎ) ನಿಮ್ಮ (ಬಿ) ತಮ್ಮ<br>(ಸಿ) ನೀವು (ಡಿ) ಅವರು<br>***ಉತ್ತರ :*** (ಬಿ) ತಮ್ಮ | |
| | **ಸಂಬಂಧೀಪದ ಬರೆಯುವುದು (ಪ್ರತೀ ಸರಿಯುತ್ತರಕ್ಕೆ 1 ಅಂಕ) :** | 4 × 1 = 4 |
| 56. | ಊರೂರು : ದ್ವಿರುಕ್ತಿ :: ಕೆನೆಮೊಸರು : ......................... .<br>***ಉತ್ತರ :*** ಜೋಡುನುಡಿ | |
| 57. | ಯುದ್ಧ : ಜುದ್ದ :: ಪ್ರಸಾದ : ......................... .<br>***ಉತ್ತರ :*** ಹಸಾದ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 58. | ಶ್ರಮಣಿ : ತಪಸ್ವಿನಿ :: ಸುರಭಿ : ......................... . | |
| | ***ಉತ್ತರ :*** ಕಾಮಧೇನು | |
| 59. | ಆಸ್ಪತ್ರೆ : ಪೋರ್ಚ್‌ಗೀಸ್ :: ದವಾಖಾನೆ : ......................... . | |
| | ***ಉತ್ತರ :*** ಫಾರ್ಸಿ | |
| 60. | **ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸನ್ನು ಹೆಸರಿಸುವುದು :** | |
| | ಪ್ರಸ್ತಾರ ಹಾಕುವುದು | 1 ಅಂಕ |
| | ಗಣ ವಿಭಾಗಿಸುವುದು | 1 ಅಂಕ |
| | ಛಂದಸ್ಸಿನ ಹೆಸರು ಬರೆಯುವುದು | 1 ಅಂಕ |
| | ಒಟ್ಟು | 3 ಅಂಕಗಳು |

ಪುಟ್ಟಿದ ನೂರ್ವರುಮೆನ್ನೊಡ

ವುಟ್ಟಿದ ನೂರ್ವರುಮಿದಿರ್ಚಿ ಸತ್ತೊಡೆ ಕೋಪಂ

***ಅಥವಾ***

ಖಳನೊಳವಿಂಗೆ ಕುಪ್ಪೆವರಮೆಂಬವೊಲಾಂಬರಮುಂಟೆ ನಿನ್ನದೊಂ

***ಉತ್ತರ :***

| 4 | 4 | 4 | |
|---|---|---|---|
| — U U | — U U | — U U | |
| ಪುಟ್ಟಿದ | ನೂರ್ವರು | ಮೆನ್ನೊಡ | 4 × 3 = 12 |

| 4 | 4 | 4 | 4 | 4 | |
|---|---|---|---|---|---|
| — U U | — U U | U — U | — U U | — — | |
| ವುಟ್ಟಿದ | ನೂರ್ವರು | ಮಿದಿರ್ಚಿ | ಸತ್ತೊಡೆ | ಕೋಪಂ | 4 × 5 = 20 |

ಇದು ಮಾತ್ರಾಗಣ ಛಂದಸ್ಸಿನ ಕಂದ ಪದ್ಯ ನಿಯಮದಲ್ಲಿ ರಚಿತವಾಗಿದೆ.

***ಅಥವಾ***

| ನ | ಜ | ಭ | ಜ | ಜ | ಜ | ರ |
|---|---|---|---|---|---|---|
| U U U | U — U | — U U | U — U | U — U | U — U | — U — |
| ಖಳನೊ | ಳವಿಂಗೆ | ಕುಪ್ಪೆವ | ರಮೆಂಬ | ವೊಲಾಂಬ | ರಮುಂಟೆ | ನಿನ್ನದೊಂ |

ಇದು ಅಕ್ಷರ ಗಣ ಛಂದಸ್ಸಿನ ಚಂಪಕಮಾಲಾ ವೃತ್ತದ ಲಕ್ಷ್ಯವಾಗಿದೆ.

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 61. | **ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯ ಮಾಡುವುದು :** | 1 × 3 = 3 |
| | ಅಲಂಕಾರವನ್ನು ಹೆಸರಿಸುವುದು | 1 ಅಂಕ |
| | ಲಕ್ಷಣ ಬರೆಯುವುದು | 1 ಅಂಕ |
| | ಅಂಶಗಳನ್ನು ಗುರುತಿಸಿ, ಸಮನ್ವಯಿಸುವುದು | 1 ಅಂಕ |
| | ಒಟ್ಟು | 3 ಅಂಕಗಳು |

"ಮಾರಿಗೌತಣವಾಯ್ತು ನಾಳಿನ ಭಾರತವು"

***ಅಥವಾ***

"ಅಚ್ಛೋದ ಸರೋವರವು ತ್ರೈಲೋಕ್ಯಲಕ್ಷ್ಮೀಯು ತನ್ನ ಸೌಂದರ್ಯವನ್ನು ನೋಡಲು ಮಾಡಿಟ್ಟ ರನ್ನಗನ್ನಡಿಯೋ ಎಂಬಂತೆ ಶೋಭಿಸಿತು."

"ಮಾರಿಗೌತಣವಾಯ್ತು ನಾಳಿನ ಭಾರತವು"

***ಉತ್ತರ :***

*ಅಲಂಕಾರದ ಹೆಸರು* : ರೂಪಕಾಲಂಕಾರ

*ಲಕ್ಷಣ* : ಅತಿ ಸಾಮ್ಯತೆಯಿಂದಾಗಿ ಉಪಮೇಯ ಉಪಮಾನಗಳಲ್ಲಿ ಅಭೇದವನ್ನು ಹೇಳಿ ವರ್ಣಿಸಿದಾಗ ಅದು ರೂಪಕ ಅಲಂಕಾರವೆನಿಸುತ್ತದೆ.

*ಸಮನ್ವಯ :*

*ಉಪಮೇಯ* : ನಾಳಿನ ಭಾರತ (ಭಾರತ ಯುದ್ಧ)

*ಉಪಮಾನ* : ಮಾರಿಗೌತಣ

ಉಪಮೇಯವಾದ ನಾಳಿನ ಭಾರತವನ್ನು ಉಪಮಾನವಾದ ಮಾರಿಗೌತಣಕ್ಕೆ ಅಭೇದವಾಗಿ ರೂಪಿಸಿರುವುದರಿಂದ ಇದು ರೂಪಕಾಲಂಕಾರದ್ದಾಗಿದೆ.

***ಅಥವಾ***

ಅಚ್ಛೋದ ಸರೋವರವು ತ್ರೈಲೋಕ್ಯ ಲಕ್ಷ್ಮಿಯು ತನ್ನ ಸೌಂದರ್ಯವನ್ನು ನೋಡಲು ಮಾಡಿಟ್ಟ ರನ್ನಗನ್ನಡಿಯೋ ಎಂಬಂತೆ ಶೋಭಿಸಿತು.

*ಅಲಂಕಾರದ ಹೆಸರು* : ಉತ್ಪ್ರೇಕ್ಷಾಲಂಕಾರ

*ಲಕ್ಷಣ* : ಉಪಮೇಯವಾದ ವಸ್ತುವನ್ನು ಅಥವಾ ಸನ್ನಿವೇಶವನ್ನು ಉಪಮಾನವಾದ ವಸ್ತುವನ್ನಾಗಿ ಅಥವಾ ಸನ್ನಿವೇಶವನ್ನಾಗಿ ಕಲ್ಪಿಸುವುದೇ ಉತ್ಪ್ರೇಕ್ಷಾಲಂಕಾರ.

*ಸಮನ್ವಯ :*

*ಉಪಮೇಯ* : ಅಚ್ಛೋದ ಸರೋವರ

*ಉಪಮಾನ* : ರನ್ನಗನ್ನಡಿ

ಉಪಮೇಯವಾದ ಅಚ್ಛೋದ ಸರೋವರವನ್ನು ಉಪಮಾನವಾದ ರನ್ನಗನ್ನಡಿ ಎಂಬುದಾಗಿ ಕಲ್ಪಿಸಿರುವುದರಿಂದ ಇದು 'ಉತ್ಪ್ರೇಕ್ಷಾಲಂಕಾರ'ದ್ದಾಗಿದೆ.

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ವಿಭಾಗ – 'ಸಿ'** <br> **(ವಾಕ್ಯರಚನೆ ಹಾಗೂ ಬರೆವಣಿಗೆ ಕೌಶಲ)** | |
| 62. | **ಗಾದೆಯನ್ನು ವಿಸ್ತರಿಸಿ ಬರೆಯುವುದು :** | 1 × 3 = 3 |
| | * ಕುಂಬಾರನಿಗೆ ವರುಷ; ದೊಣ್ಣೆಗೆ ನಿಮಿಷ | |
| | * ದೇಶ ನೋಡು; ಕೋಶ ಓದು | |
| | * ಆಳಾಗಬಲ್ಲವನು ಅರಸಾಗಬಲ್ಲನು | |
| | ***ಉತ್ತರ :*** | |
| | ಗಾದೆಯ ಮಹತ್ವದ ವಿವರಣೆ | 1 ಅಂಕ |
| | ಉದಾಹರಣೆಯೊಂದಿಗೆ ಅರ್ಥ ವಿವರಣೆ | 1 ಅಂಕ |
| | ಭಾಷಾಶೈಲಿಗೆ–ಪದಬಂಧಗಳಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 63. | **ಪತ್ರ ಲೇಖನ ಬರೆಯುವುದು :** | 1 × 5 = 5 |
| | ನಿಮ್ಮನ್ನು ಇಳಕಲ್ಲಿನ ಬಾಲಿಕೆಯರ ಸರ್ಕಾರಿ ಪ್ರೌಢಶಾಲೆಯ 'ಯಶೋಧಾ' ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ಏರ್ಪಡಿಸಿದ 'ವಿದ್ಯಾರ್ಥಿನಿಯರ ಕರಾಟೆ ಕೌಶಲ ತರಬೇತಿ'ಯ ಸಮಾರೋಪ ಸಮಾರಂಭದ ವರದಿಯನ್ನು ಪ್ರಕಟಿಸುವಂತೆ ಕೋರಿ 'ಕನ್ನಡ ಪ್ರಭ' ದಿನಪತ್ರಿಕೆಯ ಸಂಪಾದಕರಿಗೆ ಮನವಿ ಪತ್ರವೊಂದನ್ನು ಬರೆಯಿರಿ. | |
| | ***ಅಥವಾ*** | |
| | ನಿಮ್ಮನ್ನು ವಿಜಯಪುರದ ಐಶ್ವರ್ಯ ನಗರಲ್ಲಿ ವಾಸವಾಗಿರುವ 'ರಾಜೇಶ್ವರಿ' ಎಂದು ಭಾವಿಸಿಕೊಂಡು, ಶಾಲೆಯಲ್ಲಿ ಆಚರಿಸಿದ ವಾರ್ಷಿಕೋತ್ಸವ ಕಾರ್ಯಕ್ರಮಗಳ ವಿಶೇಷತೆಯನ್ನು ಕುರಿತು ಬಾದಾಮಿಯ ಪುಲಿಕೇಶಿ ನಗರದಲ್ಲಿರುವ ಅಣ್ಣ 'ಬಸವೇಶ'ನಿಗೆ ಪತ್ರವೊಂದನ್ನು ಬರೆಯಿರಿ. | |
| | ***ಉತ್ತರ :*** | |
| | *ವ್ಯಾವಹಾರಿಕ / ಮನವಿ ಪತ್ರ :* | |
| | ಇಂದ, ಗೆ, ಸಂಬೋಧನೆ, ವಿಷಯ | 1 ಅಂಕ |
| | ಪತ್ರದ ಒಡಲು, ವಿಷಯ ನಿರೂಪಣೆ | 2 ಅಂಕಗಳು |
| | ಮುಕ್ತಾಯ, ಇಂತಿ, ಸ್ಥಳ, ದಿನಾಂಕ | 1 ಅಂಕ |
| | ಭಾಷಾಶೈಲಿಗೆ, ಪದಬಳಕೆ, ವಿನ್ಯಾಸ | 1 ಅಂಕ |
| | ಒಟ್ಟು | 5 ಅಂಕಗಳು |
| | ***ಅಥವಾ*** | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | *ಖಾಸಗಿ / ಅಣ್ಣನಿಗೆ ಪತ್ರ :* | |
| | ಇಂದ ವಿಳಾಸ, ದಿನಾಂಕ, ಸಂಬೋಧನೆ, ಕ್ಷೇಮ ವಿಚಾರ | 1 ಅಂಕ |
| | ಪತ್ರದ ಒಡಲು, ವಿಷಯ ನಿರೂಪಣೆ | 2 ಅಂಕಗಳು |
| | ವಂದನೆಯೊಂದಿಗೆ ಮುಕ್ತಾಯ, ಇಂತಿ, ಸಹಿ, ಹೊರ ವಿಳಾಸ | 1 ಅಂಕ |
| | ಭಾಷಾಶೈಲಿಗೆ, ಪದ ಬಳಕೆ, ವಿನ್ಯಾಸ | 1 ಅಂಕ |
| | ಒಟ್ಟು | 5 ಅಂಕಗಳು |
| 64. | **ಪ್ರಬಂಧ ಬರೆವಣಿಗೆ :** | |
| | * ಸ್ವಚ್ಛ ಭಾರತ ಅಭಿಯಾನದಲ್ಲಿ ವಿದ್ಯಾರ್ಥಿಗಳ ಪಾತ್ರ | |
| | * ರಾಷ್ಟ್ರೀಯ ಭಾವೈಕ್ಯತೆಯಲ್ಲಿ ರಾಷ್ಟ್ರೀಯ ಹಬ್ಬಗಳ ಮಹತ್ವ | |
| | * ಮಹಿಳಾ ಸಬಲೀಕರಣ | |
| | ***ಉತ್ತರ :*** | |
| | ಪ್ರಸ್ತಾವನೆ / ಪೀಠಿಕೆ / ವಿಷಯ ಪ್ರವೇಶ | 1 ಅಂಕ |
| | ಒಡಲು–ಸಮರ್ಥ ವಿವರಣೆಯೊಂದಿಗೆ ವಿಷಯಕ್ಕೆ | 2 ಅಂಕಗಳು |
| | ಉಪಸಂಹಾರ / ಮುಕ್ತಾಯ / ವಿಷಯ ಸಮಾಪ್ತಿ | 1 ಅಂಕ |
| | ಭಾಷಾಶೈಲಿಗೆ, ಪದಬಂಧ | 1 ಅಂಕ |
| | ಒಟ್ಟು | 5 ಅಂಕಗಳು |